ಐಕ್ಯರಂಗ

ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಕರ್ನಾಟಕ ರಾಜ್ಯಸಮಿತಿಯ ಮುಖಪತ್ರಿಕೆ

ಸಂಪುಟ 3 | ಸಂಚಿಕೆ 18 | ಮೇ 3, 1981 | ಬೆಲೆ : 50 ಪೈಸೆ

ಮೇ ದಿನಾಚರಣೆ

ರಾಷ್ಟ್ರವನ್ನಾಳುವ ಇಂದಿರಾ ಕಾಂಗ್ರೆಸ್ಸು ಸರಕಾರ ದಿನೇದಿನೇ ಹೆಚ್ಚುಹೆಚ್ಚು ಸರ್ವಾಧಿಕಾರ ಕ್ರಮಗಳನ್ನು ಅನುಸರಿಸುತ್ತಿರುವುದು; ಪಾರ್ಲಿಮೆಂಟು ಮತ್ತು ನ್ಯಾಯಾಂಗಗಳಿಗೆ ಏನೇನೂ ಬೆಲೆ ಈಯದೆ ಕರಾಳ ಸುಗ್ರೀವಾಜ್ಞೆಗಳ ಮತ್ತು ಶಾಸನಗಳ ಮೂಲಕ ಪ್ರಜಾಪ್ರಭುತ್ವ ಹಕ್ಕುಗಳನ್ನು ಹತ್ತಿಕ್ಕುವುದು; ಕಾರ್ಮಿಕವರ್ಗದ ಸಂಘಟನಾ ಹಕ್ಕುಗಳನ್ನು ಹತ್ತಿಕ್ಕಿ, ಅವರ ಮೇಲೆ ಆರ್ಥಿಕ ಬಿಕ್ಕಟ್ಟಿನ ಹೊರೆಯನ್ನು ಹೇರುವುದು; ರೈತರು ಮತ್ತಿತರ ವಿಭಾಗದ ಜನತೆಯ ಸಂಘಟಿತ ಚಳುವಳಿಗಳನ್ನು ಹತ್ತಿಕ್ಕುವುದು; ಕಾಂಗ್ರೆಯೇತರ ಸರಕಾರಗಳನ್ನು ಉರುಳಿಸಲು ಪ್ರಯತ್ನ-ಇವೆಲ್ಲಾ ಒಂದೆಡೆ.

ಇವೆಲ್ಲವುಗಳ ವಿರುದ್ಧ ಎಡಪ್ರಜಾಪ್ರಭುತ್ವ ಶಕ್ತಿಗಳ ನೇತೃತ್ವದಲ್ಲಿ ಕಾರ್ಮಿಕರು ಮತ್ತು ರೈತರು ಹಾಗೂ ಇತರೆ ಜನವಿಭಾಗ ರಾಷ್ಟ್ರದಾದ್ಯಂತ ಸಂಘಟಿತ ಚಳುವಳಿ ಪ್ರಾರಂಭಿಸಿದ್ದು, ಜನತೆಯ ಹೋರಾಟಗಳಲ್ಲೂ, ತಮ್ಮ ಬೇಡಿಕೆಗಳ ಬಗ್ಗೆ ನಡೆಯುವ ಹೋರಾಟಗಳಲ್ಲೂ ಸಂಘಟಿತ ಕಾರ್ಮಿಕವರ್ಗ ಹೆಚ್ಚಿನ ಐಕ್ಯತೆಯಿಂದ ಮುಂದೆ ಬಂದಿದೆ. ಕರ್ನಾಟಕ ರಾಜ್ಯದಲ್ಲೂ ಇತ್ತೀಚಿಗಿನ ದಿನಗಳಲ್ಲಿ ಐಕ್ಯಹೋರಾಟಗಳು ಬೆಳೆದುಬಂದಿವೆ.

ಸಂಪಾದಕೀಯ

ದುಡಿಯುವ ಜನತೆ ಒಂದಾಗುವುದನ್ನು ಸಹಿಸದೆ ಪ್ರತಿಗಾಮಿ ಶಕ್ತಿಗಳೂ, ಸ್ಥಾಪಿತ ಹಿತಾಸಕ್ತಿಗಳು ಜಾತಿಮತದ ಹೆಸರಿನಿಂದ, ಭಾಷೆ ಮತ್ತು ಕೋಮು ಭಾವನೆಗಳ ಮೂಲಕ, ಸಂಕುಚಿತವಾದದ ಮೂಲಕ ಐಕ್ಯತೆಯನ್ನು ಮುರಿಯಲು ಪ್ರಯತ್ನಿಸುತ್ತಿವೆ. ಧರ್ಮದ ಪುನರುತ್ಥಾನದ ಹೆಸರಲ್ಲಿ ದುಡಿಯುವ ಜನತೆಯ ಒಗ್ಗಟ್ಟನ್ನು ಮುರಿಯುವ ಪ್ರಯತ್ನ ನಡೆಯುತ್ತಿದೆ.

ಈ ಹಿನ್ನೆಲೆಯಲ್ಲಿ ಅಂತರಾಷ್ಟ್ರೀಯ ಕಾರ್ಮಿಕ ದಿನವಾದ "ಮೇ ದಿನಾಚರಣೆ"ಯು ನಡೆಯುತ್ತಿದೆ. ಸಂಘಟಿತ ಕಾರ್ಮಿಕವರ್ಗದ ಮೇಲಿನ ಧಾಳಿಯನ್ನು ಎದುರಿಸಿ, ಸರ್ವಾಧಿಕಾರ ಮತ್ತು ಛಿದ್ರಕಾರಿ ಶಕ್ತಿಗಳ ವಿರುದ್ಧ ಒಂದಾಗಿ, ರಾಷ್ಟ್ರದಾದ್ಯಂತ ಕಾರ್ಮಿಕವರ್ಗದ ಐಕ್ಯತೆಯನ್ನು ಸಾಧಿಸುವುದು, ಎಡ ಪ್ರಜಾಪ್ರಭುತ್ವ ಶಕ್ತಿಗಳನ್ನು ಮುನ್ನಡೆಸಲು ಮುಂದಾಗುವುದೇ ಕಾರ್ಮಿಕವರ್ಗದ ಮೇ ದಿನದ ಘೋಷಣೆ. ಜಂಟೀಯಾಗಿ ಮೇ ದಿನಾಚರಣೆಯನ್ನು ಆಚರಿಸಲು ಮುಖ್ಯ ಕೇಂದ್ರ ಕಾರ್ಮಿಕ ಸಂಘಟನೆಗಳು ಒಂದಾದುದು ಶುಭ ಸಂಕೇತ. ನಮ್ಮ ಓದುಗರೆಲ್ಲರಿಗೂ ಮೇ ದಿನದ ಶುಭಾಶಯಗಳು. ○

ಮೈಕೋನಲ್ಲಿ ಲಾಠೀಚಾರ್ಜ್, ಅಶ್ರುವಾಯು

ಇಂಟಕ್‌ನ ಎಫ್. ಎಂ. ಖಾನ್‌ರನ್ನು ಮೈಕೋ ಅಧ್ಯಕ್ಷರೆಂದು ಮೈಕೋನಲ್ಲಿರುವ ಅವರ ಕೆಲವು ಚೇಲಾಗಳು ಘೋಷಿಸಿ 29-4-1981 ರಂದು ಮೈಕೋ ಫ್ಯಾಕ್ಟರಿಯೆದುರು ಬಹಿರಂಗಸಭೆ ಏರ್ಪಡಿಸಿದ್ದರು. ಇದನ್ನು ಪ್ರತಿಭಟಿಸಿದ ಕಾರ್ಮಿಕರನ್ನು ಪೋಲೀಸರು ಕಾರ್ಖಾನೆ ಆವರಣದೊಳಗೇ ನುಗ್ಗಿ ಸಿಕ್ಕಾಪಟ್ಟೆ ಥಳಿಸಿ, ಅಶ್ರುವಾಯು ಪ್ರಯೋಗ ಮಾಡಿದ್ದಾರೆ.

ಕಳೆದ 2ತಿಂಗಳಿಂದ ಮೈಕೋ ಕಾರ್ಮಿಕರ ಸರ್ವಸದಸ್ಯರ ಸಭೆಗೆ ಪೋಲೀಸ್ ಕಮೀಷನರು ಅನುಮತಿ ಕೊಟ್ಟಿರಲಿಲ್ಲ. 27-4-81ರಂದು ಸಭೆ ನಡೆಸಲು ಅನುಮತಿ ದೊರಕಿತು. ಅಂದೇ ಖಾನ್ ಬಳಗದವರಿಗೂ ಅನುಮತಿಕೊಟ್ಟು ಆ ಸಭೆಗೆ ಕಾರ್ಮಿಕರನ್ನು ಹಾಜರಾಗಿಸುವ ಉದ್ದೇಶದಿಂದ ಬೆಳಗಿನ 9 ಘಂಟೆಗೆ ಕೊಟ್ಟಿದ್ದ ಅನುಮತಿಯನ್ನು 1ಘಂಟೆಗೆ ಜರುಗಿಸಬೇಕೆಂದು ಕಮೀಷನರು ಆದೇಶ ಕೊಟ್ಟರು. ಖಾನ್ ಹಿಂಬಾಲಕರು ಪೋಲೀಸ್ ನೆರವಿನಿಂದ ಕಾರ್ಮಿಕರನ್ನು ಸೆಳೆಯುವ ವಿಶ್ವಪ್ರಯತ್ನ ಮಾಡಿದರೂ ಆ ಸಭೆಗೆ ಕೇವಲ ನೂರು ಜನರು ಮಾತ್ರ ಹಾಜರಿದ್ದರು. 1 ಘಂಟೆಗೆ ಆಸ್ಟಿನ್‌ಟೌನ್‌ನಲ್ಲಿ ಕಾಂ. ಸೂರ್ಯನಾರಾಯಣರಾವ್‌ರ ಅಧ್ಯಕ್ಷತೆಯಲ್ಲಿ ನಡೆದ ಸಭೆಗೆ ಸುಮಾರು 5000 ಕಾರ್ಮಿಕರು ಸೇರಿ ಕಾಂ. ಸೂರ್ಯನಾರಾಯಣರಾವ್‌ರಲ್ಲಿ ವಿಶ್ವಾಸ ವ್ಯಕ್ತಪಡಿಸಿತು.

29-4-81ರಂದು ಸ್ವಯಂ ಘೋಷಿತ ಅಧ್ಯಕ್ಷ ಎಫ್. ಎಂ. ಖಾನ್‌ರನ್ನು ಫ್ಯಾಕ್ಟರಿಗೇಟ್ ಎದುರು ಕರೆತರಲಾಯಿತು. ಪೋಲೀಸರು ಮತ್ತು ಗೂಂಡಾ ಪಡೆಗಳೊಂದಿಗೇ ಬಂದಿದ್ದ ಖಾನ್ ಫ್ಯಾಕ್ಟರಿಯೊಳಗೆ ಪ್ರವೇಶಿಸಿ ಪೋಲೀಸರಿಂದ ಮತ್ತು ಗೂಂಡಾಗಳಿಂದ ಫ್ಯಾಕ್ಟರಿಯೊಳಗಿದ್ದ ಕಾರ್ಮಿಕರ ಮೇಲೆ ಹಲ್ಲೆ ಮಾಡಲು ಪ್ರಚೋದಿಸಿದರು. ಪೋಲೀಸರ, ಗೂಂಡಾಗಳ ದಾಳಿಯಿಂದಾಗಿ ಸುಮಾರು 40ಕ್ಕೂ ಹೆಚ್ಚು ಜನ ಗಾಯಗೊಂಡಿದ್ದಾರೆ. ಪೋಲೀಸರು ಇದಿಷ್ಟೇ ಸಾಲದೆಂಬಂತೆ ಅಶ್ರುವಾಯು ಪ್ರಯೋಗವನ್ನೂ ನಡೆಸಿ ಸುಮಾರು 200 ಕಾರ್ಮಿಕರನ್ನು ಬಂಧಿಸಿದ್ದಾರೆ.

ಮೈಕೋ ಕಾರ್ಮಿಕರ ಮೇಲಾದ ಹಲ್ಲೆ ಪ್ರಜಾಪ್ರಭುತ್ವ ಹಕ್ಕುಗಳ ಮೇಲಾದ ಹಲ್ಲೆ. ಅತ್ಯಂತ ಬಹುಸಂಖ್ಯಾತ ಕಾರ್ಮಿಕರ ಬೆಂಬಲವಿರುವ ಕಾಂ. ಸೂರ್ಯನಾರಾಯಣರಾವ್ ನೇತೃತ್ವದ ಸಂಘಕ್ಕೆ ಕಾರ್ಯನಿರ್ವಹಿಸಲು ಫ್ಯಾಸಿಸ್ಟ್ ಶಕ್ತಿಗಳು ಅವಕಾಶ ಕೊಡುತ್ತಿಲ್ಲ. ಇದಕ್ಕೆ ಬೆಂಗಳೂರಿನ ಸರ್ವಾಧಿಕಾರಿ ಪೋಲೀಸ್ ಕಮೀಷನರು ಕುಮ್ಮಕ್ಕು ಕೊಡುತ್ತಿದ್ದಾರೆ.

ಮೈಕೋ ಕಾರ್ಮಿಕರ ಮೇಲೆ ನಡೆದ ದಾಳಿಯನ್ನು ಸಿ.ಐ.ಟಿ.ಯು. ಪರವಾಗಿ ಕಾಂ. ವಿ.ಜೆ.ಕೆ. ನಾಯರ್ ಅವರು ಉಗ್ರವಾಗಿ ಖಂಡಿಸಿದ್ದಾರೆ. ○

ಅಸ್ಸಾಂನಲ್ಲಿ ಎಡಪಂಥೀಯರ ತತ್ವಬದ್ಧ ನಿಲುವು

ಅಸ್ಸಾಂ ವಿಧಾನಸಭೆಯಲ್ಲಿ ಅವಿಶ್ವಾಸ ಗೊತ್ತುವಳಿಯ ಮೇಲೆ ಎಡಪಂಥೀಯರು ತಳೆದ ತಟಸ್ಥನಿಲುವಿನ ಬಗ್ಗೆ ಪತ್ರಿಕಾ ವರದಿಗಾರರು ಎಬ್ಬಿಸಿದ ಊಹಾಪೋಹಗಳ ಮೋಡ ಚದುರಿತು ಎನ್ನುವಷ್ಟರಲ್ಲೇ ತೈಮೂರು ಮಂತ್ರಿಮಂಡಲ ಎದುರಿಸಬೇಕಾದ 'ನವೀನ ಬಿಕ್ಕಟ್ಟಿ'ನ ವರದಿಗಳು ಪ್ರಕಟವಾಗಿವೆ.

ಮಾರ್ಚ್ 28ರ ಯು.ಎನ್.ಐ. ವರದಿಯೊಂದು "ರಾಜ್ಯ ವಿಧಾನಸಭೆಯಲ್ಲಿ ಪೂರಕ ಬೇಡಿಕೆಯೊಂದನ್ನು ಹಿಂತೆಗೆದುಕೊಳ್ಳಬಯಸಿದ ಸರಕಾರದ ಯತ್ನಕ್ಕೆ ವಿರೋಧ ಪಕ್ಷದವರು ಆಕ್ಷೇಪವೆತ್ತಿದ್ದರಿಂದ ಅಸ್ಸಾಂನ ಕಾಂಗ್ರೆಸ್ (ಐ) ಮಂತ್ರಿಮಂಡಲ ಮತ್ತೊಂದು ಹೊಸ ಬಿಕ್ಕಟ್ಟಿನ ಯಾತನೆ ಅನುಭವಿಸುತ್ತಿರುವಂತೆ ಕಾಣಿಸುತ್ತಿದೆ" ಎಂದು ತಿಳಿಸುತ್ತದೆ.

ವರದಿ ಮುಂದುವರಿದು "ರಾಷ್ಟ್ರೀಯ ಭದ್ರತಾ ಶಾಸನ, 1980ರ ಸಲಹಾಮಂಡಳಿಯ ಸದಸ್ಯರ ತಕ್ಷಣದ ಪ್ರಯಾಣ ಭತ್ಯೆ, ತಂಟ್ಟಿ ಭತ್ಯೆ, ಅಧಿವೇಶನ ಶುಲ್ಕ ಇತ್ಯಾದಿ ಹಾಗೂ ಬಂಧಿತರ ಸಂಸಾರಗಳಿಗೆ ಕೊಡಬೇಕಾದ ಭತ್ಯೆಗಳಿಗಾಗಿ ಸಾದಿಲ್ವಾರು ನಿಧಿ (Contingency Fund)ಯಿಂದ 50,000 ರೂಪಾಯಿಗಳ ಈ ಮುಂಗಡ ಅನುದಾನವನ್ನು ಪಡೆಯಲಾಗಿತ್ತು" ಎಂದೂ ಹೇಳುತ್ತದೆ.

ನಾಲ್ಕು ಸಿ.ಪಿ ಐ.(ಎಂ) ಸದಸ್ಯರು ಈ ಅನುದಾನವನ್ನು ಕಡಿತಗೊಳಿಸಬೇಕೆಂಬ ಗೊತ್ತುವಳಿಯನ್ನು ಮಂಡಿಸಿದರು. ಯು.ಎನ್.ಐ. ವರದಿ ಪ್ರಕಾರ ಆ ಗೊತ್ತುವಳಿಯ ಮೇಲಿನ ಚರ್ಚೆಯ ಕೊನೆಯಲ್ಲಿ ಗೃಹಮಂತ್ರಿ ಸಹಾರಿಯಾರವರು ಸದನದ ಆಶಯವನ್ನು ಗೌರವಿಸಿ ಅನುದಾನವನ್ನು ವಾಪಸ್ಸುಪಡೆಯಲು ಅನುಮತಿ ಬಯಸಿದರು.

ಆದರೆ ಈ ಹಣವನ್ನು ಈಗಾಗಲೇ ಖರ್ಚುಮಾಡಿದ್ದು ಅನುದಾನದ ಬೇಡಿಕೆಯನ್ನು ಹಿಂತೆಗೆದುಕೊಳ್ಳಲು ಅನುಮತಿ ಕೊಡುವುದಕ್ಕಾಗುತ್ತದೆಯೇ ಎಂಬ ಪ್ರಶ್ನೆಯೆದ್ದಿತು. ಆಗ ಅಧ್ಯಕ್ಷ ಪೀಠದಲ್ಲಿದ್ದ ಉಪಸಭಾಧ್ಯಕ್ಷರಿಗೆ ಈ ಕುರಿತು ನಿರ್ಧಾರಕ್ಕೆ ಬರಲು ಸಾಧ್ಯವಾಗಲಿಲ್ಲವಾದ್ದರಿಂದ ಸದನದ ಕಲಾಪಗಳು ಆ ದಿನಕ್ಕೆ ಸ್ಥಗಿತಗೊಂಡವು.

ಇದು ಅಸ್ಸಾಂ ವಿಧಾನಸಭೆಯಲ್ಲಿನ ನಿಜವಾದಸ್ಥಿತಿಗೆಉದಾಹರಣೆ. ಒಂದೆಡೆ ಜನತಾ ಹಾಗೂ ಅವರ ಸಹಯೋಗಿಗಳಿಗೆ ಸರ್ಕಾರವನ್ನು ಕೆಳಗಿಳಿಸುವುದು ಸಾಧ್ಯವಿಲ್ಲವಾದರೆ ಇನ್ನೊಂದೆಡೆ ಸರಕಾರಕ್ಕೂ ದೀರ್ಘಕಾಲ ಅಧಿಕಾರದಲ್ಲಿರುವುದು ಸಾಧ್ಯವಿಲ್ಲ. ಈ ಇಬ್ಬರಲ್ಲಿ ಪ್ರತಿಯೊಬ್ಬರಿಗೂ ತಮ್ಮಿಷ್ಟದಂತೆ ವರ್ತಿಸಲು ಸಾಧ್ಯವಾಗುತ್ತಿಲ್ಲ. ಯಾಕೆಂದರೆ

ಇ. ಎಂ. ಎಸ್.

ಯಾವುದೇ ರೀತಿಯಲ್ಲೂ ನಿರ್ಣಯದ ಕೀಲಿಕೈ 23 ಮಂದಿಯ ಸದಸ್ಯತ್ವವಿರುವ ಎಡಪಂಥೀಯರ ಕೈಯಲ್ಲಿದೆ. ಎಡಪಂಥೀಯರ ತಟಸ್ಥ ನಿಲುವು ಸದ್ಯ ಸರ್ಕಾರವನ್ನು ಉಳಿಸಿತೆಂಬುದು ನಿಸ್ಸಂಶಯ. ಆದರೆ ಪೂರಕಬೇಡಿಕೆ ಹಾಗೂ ಕಡಿತದ ಗೊತ್ತುವಳಿ ಅದರ ಅಲ್ಪಮಂತವನ್ನು ಬಯಲುಮಾಡಿದೆ. ಎಡಪಂಥೀಯರಿಗೆ ಸ್ವಂತ ಸ್ವತಂತ್ರ ನಿಲುವಿದೆ ಹಾಗೂ ಪ್ರತಿಯೊಂದು ವಿವಾದ ಕುರಿತಂತೆ ಅದರ ಯೋಗ್ಯತೆಯನ್ನಾಧರಿಸಿ ತಮ್ಮ ನಿಲುವನ್ನು ನಿರ್ಧರಿಸುತ್ತಾರೆ ಎಂಬುದನ್ನು ಸಿ.ಪಿ.ಐ.(ಎಂ) ಹಾಗೂ ಇತರ ಎಡಪಕ್ಷಗಳುತೋರಿಸಿಕೊಟ್ಟಿವೆ. ಸಿ.ಪಿ.ಐ.(ಎಂ) ತೈಮೂರ್ ಮಂತ್ರಿಮಂಡಲಕ್ಕೆ ನೀಡಿದ ಸಹಾಯಕ್ಕೆ ಪ್ರತಿಯಾಗಿ ಕಾಂಗ್ರೆಸ್(ಐ)ಪಶ್ಚಿಮ ಬಂಗಾಳದಲ್ಲಿ ಕೈಕಟ್ಟಿಕೂರುತ್ತದೆ ಎಂಬ ರೀತಿಯಲ್ಲಿ ಸಿ.ಪಿ.ಐ.(ಎಂ)ಮತ್ತು ಕಾಂಗ್ರೆಸ್(ಐ) ನಡುವೆ ಒಂದು ರೀತಿಯ 'ಒಪ್ಪಂದ' ಏರ್ಪಟ್ಟಿದೆ ಎಂದು ಬೂರ್ಜ್ವಾ ಪತ್ರಿಕೆಗಳಲ್ಲಿ ವ್ಯವಸ್ಥಿತವಾಗಿ ನಡೆದ ಊಹಾಪೋಹಗಳ ಪೊಳ್ಳುತನವನ್ನು ಇದು ಬಯಲುಮಾಡಿದೆ.

ವಿಧಾನಸಭೆಯಲ್ಲಿನ ಮತದಾನದ ನಂತರ 'ಇಂಡಿಯನ್ ಎಕ್ಸ್‌ಪ್ರೆಸ್'ನ ಗೌಹಾಟಿ ವರದಿಗಾರ ತನ್ನ ವರದಿಯಲ್ಲಿ "ಎರಡೂ ಕಡೆಯವರು ಎಷ್ಟೇ ನಿರಾಕರಿಸಿದರೂ, ಮಾರ್ಕ್ಸ್‌ವಾದಿಗಳು ಮತ್ತು ಕಾಂಗ್ರೆಸ್ (ಐ) ನಡುವೆ ಬಂಗಾಲ, ತ್ರಿಪುರಾ ಹಾಗೂ ಅಸ್ಸಾಂ ಬಗ್ಗೆ ಒಂದು ಸ್ಪಷ್ಟ ಒಪ್ಪಂದ–ಒಂದು ರೀತಿಯ ಸಹ ಅಸ್ತಿತ್ವದ ಒಪ್ಪಂದ ನಡೆದಿರುವಂತೆ ಕಾಣುತ್ತದೆ"ಎಂದು ಪ್ರತಿಪಾದಿಸಿದ್ದಾನೆ.

ಈ 'ತಿಳುವಳಿಕಸ್ಥ ಮನುಷ್ಯ' ಈ ಪ್ರತಿಪಾದನೆ ನಡೆಸುತ್ತಿರುವ ಸಮಯದಲ್ಲೇ ಪಶ್ಚಿಮ ಬಂಗಾಲ ಹಾಗೂ ಕೇಂದ್ರದ ಕಾಂಗ್ರೆಸ್(ಐ) ನಾಯಕರು ಕಾಂಗ್ರೆಸ್(ಐ)ನ ಐಕ್ಯತೆ ಹಾಗೂ ಪ. ಬಂಗಾಲದ ಇತರ ವಿರೋಧ ಪಕ್ಷಗಳೊಡನೆ ಒಗ್ಗಟ್ಟಾಗಿ ಎಡರಂಗದ ವಿರುದ್ಧ ಸಂಯುಕ್ತರಂಗ ಏರ್ಪಡಿಸುವ ಯೋಜನೆಗಳನ್ನು ತಯಾರಿಸುತ್ತಿದ್ದರು. ಕಾಂಗ್ರೆಸ್(ಐ) ಅಧ್ಯಕ್ಷೆ ಹಾಗೂ ಪ್ರಧಾನಮಂತ್ರಿ ಇಂದಿರಾಗಾಂಧಿಯವರು ಕೂಡಾ ಸಿ. ಪಿ. ಐ. (ಎಂ)ನ ವಿರುದ್ಧ ಒಂದು ಪಕ್ಷವಾಗಿ ಮಾತ್ರವಲ್ಲ ಮಾರ್ಕ್ಸ್‌ವಾದೀ ಸಿದ್ಧಾಂತದ ವಿರುದ್ಧವೇ ವ್ಯವಸ್ಥಿತ ಪ್ರಚಾರ ಕೈಗೊಂಡಿದ್ದರು.

ವಿಭಜನೆಯ ಮೊದಲಿನ ಕಮ್ಯುನಿಸ್ಟ್ ಚಳವಳಿ, ನಂತರ ಸಿ.ಪಿ.ಐ(ಎಂ) ಇಂದಿರಾಗಾಂಧಿ ನೇತೃತ್ವದ ಕಾಂಗ್ರೆಸ್ ಹಾರಿಸುತ್ತಿದ್ದ ಫಿರಂಗಿ ಗುಂಡುಗಳ ಪ್ರಮುಖ ಗುರಿಯೆಂಬುದು ಎಲ್ಲರಿಗೂ ತಿಳಿದ ವಿಷಯ. 1957–59ರಲ್ಲಿ ಹಾಗೂ 1967-69ರಲ್ಲಿ ಸರಕಾರಗಳ

(ಕಡೇ ಪುಟ ನೋಡಿ)

ಶ್ರೀಮತಿ ಇಂದಿರಾಗಾಂಧಿಯವರ ಸಣ್ಣತನ

ಇತ್ತೀಚಿಗೆ (ಏಪ್ರಿಲ್ 1ರಂದು) ಶ್ರೀಮತಿ ಗಾಂಧಿಯವರು ಕೇರಳ ಪ್ರವಾಸ ಕೈಗೊಂಡು ಕೆಲವು ಸಭೆಗಳನ್ನುದ್ದೇಶಿಸಿ ಮಾತನಾಡಿದರು. ಅವರು ಮಾತನಾಡಿದ ರೀತಿ ನೋಡಿದರೆ ತಾವು ದೇಶದ ಪ್ರಧಾನಿಯೆಂಬುದನ್ನು ಮರೆತಂತಿತ್ತು. ಈ ಕುರಿತು ಏಪ್ರಿಲ್ 2ರಂದು ದೆಹಲಿಯಲ್ಲಿ ಕಾಂ. ಇ. ಎಂ. ಎಸ್.ರು ಪತ್ರಕರ್ತರೊಂದಿಗೆ ಮಾತನಾಡುತ್ತಾ ತಮ್ಮ ವಿಸ್ಮಯ ವ್ಯಕ್ತಪಡಿಸಿದರು.

"ಕೇರಳದಲ್ಲಿ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷ ಮತ್ತು ಆರ್. ಎಸ್. ಎಸ್. ನಡುವೆ ನಡೆಯುತ್ತಿರುವ ಹಿಂಸಾಕೃತ್ಯಗಳ ಬಗ್ಗೆ ಅಲ್ಲಿನ ಮುಖ್ಯಮಂತ್ರಿಯವರಿಗೆ ಎಷ್ಟು ಜವಾಬ್ದಾರಿ ಇದೆಯೋ ಅಷ್ಟೇ ಜವಾಬ್ದಾರಿ ಪ್ರಧಾನಿಯವರಿಗೂ ಇರಬೇಕಿತ್ತು. ಪ್ರಧಾನಿ ಪ್ರವಾಸಮಾಡುತ್ತಿದ್ದ ದಿನದಂದೇ ಮಾರ್ಕ್ಸ್‌ವಾದಿಗಳ ಆರ್. ಎಸ್. ಎಸ್. ನಡುವೆ ನಡೆದ ಗಲಭೆಗಳಿಂದಾಗಿ 4 ಜನ ಸತ್ತರೆಂದು ಒಬ್ಬ ಜವಾಬ್ದಾರಿ ಮುಖ್ಯಮಂತ್ರಿಯಾಗಿ ಶಾಂತಿಸಮಿತಿಯ ಸಭೆಕರೆದು ಗಲಭೆಗೆ ಈಡಾದ ಪ್ರದೇಶದಲ್ಲಿ ಶಾಂತಿ ಕಾಪಾಡಲು ಪ್ರಯತ್ನಿಸಿದರೆಂದು ಇಂದಿರಾಗಾಂಧಿಯವರ ಪಕ್ಷದ ದಿನಪತ್ರಿಕೆಯಾದ ನ್ಯಾಷನಲ್ ಹೆರಾಲ್ಡ ಪತ್ರಿಕೆಯೇ ಬರೆದಿದೆ. ಆದರೆ ಪ್ರಧಾನಿಯವರು ಈ ಅವಕಾಶವನ್ನು ಅಲ್ಲಿನ ಸರಕಾರದ ಮೇಲೆ ಆರೋಪವನ್ನು ಹೊರಿಸಲು ಉಪಯೋಗಿಸಿಕೊಂಡು, ಆ ಸರಕಾರದ ವಿರುದ್ಧ ದೋಷಪೂರಿತವಾದಂತಹ ಟೀಕೆಮಾಡಿದ್ದಾರೆ".

"ಜವಾಬ್ದಾರಿ ಇರುವ ಒಂದು ದೇಶದ ಪ್ರಧಾನಿಯಾಗಿದ್ದರೆ, ಆರ್. ಎಸ್. ಎಸ್.ಗೆ ಇಲ್ಲಿ ಅಡಿಪಾಯವೇ ಇಲ್ಲವೆಂದೂ, ಅದಕ್ಕೆ ಗಲಭೆಗಳನ್ನು ಮಾಡುವ ಶಕ್ತಿ ಇಲ್ಲವೆಂದೂ, ಹಿಂಸಾಕೃತ್ಯಗಳಲ್ಲಿ ಆರ್. ಎಸ್. ಎಸ್. ಪಾತ್ರ ಬಹಳ ಕಡಿಮೆ ಎಂದು ಹೇಳುತ್ತಿರಲಿಲ್ಲ. ಮತ್ತು ಚಾರೂಮುಜುಂದಾರರ ಅನುಯಾಯಿಗಳೆಂದು ಹೇಳಿಕೊಂಡು ವರ್ಗಶತ್ರುವನ್ನು ಮುಗಿಸಿಬಿಡಬೇಕೆಂಬ ವಾದದ ಹೆಸರಿನಲ್ಲಿ ಮಾರ್ಕ್ಸ್‌ವಾದಿಗಳನ್ನು ಅಲ್ಲಗೆಳೆಯುತ್ತಾ ಹಿಂಸಾತ್ಮಕ ಚಟುವಟಿಕೆಗಳಲ್ಲಿ ತೊಡಗಿರುವ ಗುಂಪುಗಳ ಹೆಸರನ್ನೇ ಹೇಳದೇ ಈ ದೇಶದ ಉನ್ನತ ಸ್ಥಾನವಾದ ಪ್ರಧಾನಿ ಪಟ್ಟವೇರಿರುವರಿಗೆ ತಕ್ಕದ್ದಲ್ಲದ ರೀತಿಯಲ್ಲಿ ಮಾತನಾಡಿದ್ದಾರೆ. ಸುಮಾರು ಎರಡು ದಶಕಗಳಿಂದ ಅವರ ನೀತಿ, ನಡುವಳಿಕೆ ಮತ್ತು ಕಾರ್ಯವಿಧಾನ ನೋಡಿರುವ ನಮಗೆ ಇದೇನು ಆಶ್ಚರ್ಯವೆನಿಸುವುದಿಲ್ಲ. ಅವರು ಅಧಿಕಾರದಲ್ಲಿ ಇದ್ದಾಗ, ಇಲ್ಲದಿದ್ದಾಗಲೂ ಕೂಡ ದೇಶದ ಹಿತದೃಷ್ಟಿಗಿಂತ ತನ್ನ ಪಕ್ಷದ ಹಿತವೇ ದೊಡ್ಡದು ಎಂಬ ರೀತಿಯಲ್ಲೇ ನಡೆದುಕೊಂಡಿದ್ದಾರೆ. ಪ್ರತಿದಿನ ಏರುತ್ತಿರುವ ಬೆಲೆಗಳನ್ನು ಹತೋಟಿಯಲ್ಲಿಡುವುದಕ್ಕಾಗಲೀ, ವ್ಯವಸಾಯೋತ್ಪನ್ನ ಸಾಮಗ್ರಿಗಳ ಬೆಲೆಯನ್ನು ಕುಸಿಯದಂತೆ ತಡೆಗಟ್ಟುವುದಕ್ಕಾಗಲೀ, ದೇಶದ ನಾನಾಕಡೆ ನಡೆಯುತ್ತಿರುವ ಈ ಕೋಮು ಗಲಭೆಗಳನ್ನಾಗಲೀ, ಈಗ ಹೊಸದಾಗಿ ಸ್ಫೋಟಿಸಿರುವ ಗುಜರಾತ್ ಸಮಸ್ಯೆಯನ್ನಾಗಲೀ ಪರಿಹಾರ ಮಾಡುವುದಕ್ಕೆ ಪ್ರಧಾನಿಯವರಿಗೆ ಕಾಲಾವಕಾಶವಿಲ್ಲ. ಆದರೆ ಅವರಿಗೆ ಈಗ ಅವಶ್ಯವಿರುವುದು ಪ. ಬಂಗಾಲದ ಎಡರಂಗ ಸರಕಾರವನ್ನು ಉರುಳಿಸುವದು, ತ್ರಿಪುರಾದಲ್ಲಿ ತ್ರಿಪುರಾ ಉಪಜಾತಿ ಯುವಸಮಿತಿಯೊಡನೆ ಹೊಂದಾಣಿಕೆ ಮಾಡಿಕೊಳ್ಳುವದು, ಕೇರಳದಲ್ಲಿ ಆರ್.ಎಸ್.ಎಸ್. ಮತ್ತು ನಕ್ಸಲೀಯರನ್ನು ಹಿಂಸಾತ್ಮಕ ಚಟುವಟಿಕೆಗಳಿಂದ ದೋಷಮುಕ್ತಗೊಳಿಸುವದೇ ಅವರ ಪ್ರಥಮ ಕರ್ತವ್ಯವಾಗಿದೆ".

ಇನ್ನೊಂದು ಆಪಾದನೆಗೆ ಕಾಂ. ಇ.ಎಂ.ಎಸ್.ರು ಉತ್ತರ ನೀಡುತ್ತಾ "ಕೇರಳದಲ್ಲಿ ಆರ್.ಎಸ್.ಎಸ್.ನ ರಾಜಕೀಯ ಅಂಗವಾದ ಬಿ.ಜೆ.ಪಿ. ಯೊಡನೆ ರಾಜಕೀಯ ಹೊಂದಾಣಿಕೆ ಇಟ್ಟುಕೊಂಡಿರುವ ಪ್ರಧಾನಿಯವರು, ಮಾರ್ಕ್ಸ್‌ವಾದಿಗಳು ಮುಸ್ಲಿಂ ವಿರೋಧಿ ನಿಲುವನ್ನು ತಾಳಿದ್ದಾರೆಂದು ಹೇಳಿರುವದು ಆಶ್ಚರ್ಯಕರವಾಗಿದೆ. ನಿಜ ಹೇಳುವುದಾದರೆ 1980ರ ಲೋಕಸಭಾ ಚುನಾವಣೆ ಮತ್ತು ನಂತರ ನಡೆದ ವಿಧಾನಸಭಾ ಚುನಾವಣೆಗಳಲ್ಲಿ ಆರ್.ಎಸ್.ಎಸ್.ನೊಡನೆ ಚುನಾವಣೆ ಒಪ್ಪಂದ ಮಾಡಿಕೊಂಡಿದ್ದು, ಎರಡೂ ಒಂದಾಗಿ ಪ್ರಜಾಪ್ರಭುತ್ವ ರಂಗದ ಹೆಸರಿನಲ್ಲಿ ಹೋರಾಟ ಮಾಡಿದ್ದನ್ನು ಯಾರೂ ಮರೆಯುವಂತಿಲ್ಲ. 1980ರ ಚುನಾವಣಾ ಒಪ್ಪಂದ ವಿರೋಧಿ ಪಕ್ಷಗಳ ಸಂಯುಕ್ತರಂಗದ ಹೆಸರಿನಲ್ಲಿ ಈಗಲೂ ಮುಂದುವರಿಯುತ್ತಿದೆ".

"1957ರಲ್ಲಿ ಪ್ರಥಮ ಕಮ್ಯುನಿಸ್ಟ್ ಸರಕಾರ ಆಡಳಿತದಲ್ಲಿದ್ದಾಗ ಅದು ಮಾಡಿದ ಒಂದು ಕೆಲಸವನ್ನು ಇಲ್ಲಿ ಜ್ಞಾಪಿಸಿಕೊಡುವದು ಅವಶ್ಯವೆಂದೆನಿಸುತ್ತದೆ. ಕಾಂಗ್ರೆಸ್ ಸರಕಾರ ಹೊಂದಿದ್ದ ಮದ್ರಾಸ್ ಪ್ರಾಂತ್ಯಕ್ಕೆ ಸೇರಿದ್ದ ಈಗಿನ ಮಲಬಾರ ಪ್ರಾಂತದಲ್ಲಿ ಶಿಥಿಲಾವಸ್ಥೆಯಲ್ಲಿದ್ದ ಮಸೀದಿಗಳನ್ನು ಜೀರ್ಣೋದ್ಧಾರ ಮಾಡಿದ್ದು ಆಗಿನ ಕಮ್ಯುನಿಸ್ಟ್ ಸರಕಾರ. 28 ತಿಂಗಳ ತನ್ನ ಅಧಿಕಾರದ ಅವಧಿಯಲ್ಲಿ ವಿದ್ಯಾಭ್ಯಾಸದ ಅನುಕೂಲತೆಗಳಿಂದ ಹಿಡಿದು ಇತರೆ ಅನೇಕ ರೀತಿಯ ರಿಯಾಯಿತಿಗಳನ್ನು ಮುಸ್ಲಿಂರಿಗೆ ನೀಡಿದ್ದು ಅದೇ ಸರಕಾರ. ಇಂತಹ ವಿಷಯಗಳ ಬಗ್ಗೆ ಸ್ವಲ್ಪ ಕಾಲವೇ ಅಧಿಕಾರ ನಡೆಸಿದ ಕಮ್ಯುನಿಸ್ಟ್ ಸರಕಾರ ಏನು ಮಾಡಿತು ಮತ್ತು ದೀರ್ಘಕಾಲ ಅಧಿಕಾರ ನಡೆಸಿದ ಕಾಂಗ್ರೆಸ್ ಸರಕಾರ ಏನು ಮಾಡಿತು ಎಂಬುವನ್ನು ಪ್ರತಿಯೊಬ್ಬ ಮುಸ್ಲಿಂನೂ ಮರೆಯುವಂತಿಲ್ಲ".

"ವರ್ಗ ವೈಷಮ್ಯದಿಂದಾಗಿ ಮುಸ್ಲಿಂ ಲೀಗ್ ನಾಯಕರು ಆಗ ಕಾಂಗ್ರೆಸ್ ಅಧ್ಯಕ್ಷರಾಗಿದ್ದ ಇಂದಿರಾ ಗಾಂಧಿಯವರ ನಾಯಕತ್ವದಲ್ಲಿ ನಡೆದ ಕಮ್ಯುನಿಸ್ಟ್ ವಿರೋಧಿ ವಿಮೋಚನಾ–ಚಳುವಳಿಯಲ್ಲಿ ಅವರು ಭಾಗಿಗಳಾಗಿದ್ದುದೇ ಅಲ್ಲದೇ ಕಮ್ಯುನಿಸ್ಟ್ ವಿರೋಧಿ ಚುನಾವಣಾ ಒಪ್ಪಂದವನ್ನು ಕೂಡ ಮಾಡಿಕೊಂಡರು. ಚುನಾವಣೆಯಲ್ಲಿ ಗೆದ್ದಾದ ಮೇಲೆ ಇಂದಿರಾಗಾಂಧಿಯವರು ಕಮ್ಯುನಿಸ್ಟ್ ವಿರೋಧಿ ರಂಗದ ಮೂರು ಅಂಗಪಕ್ಷಗಳಲ್ಲಿ ಒಂದಾದ ಮುಸ್ಲಿಂ ಲೀಗ್‌ನ್ನು ಕೈಬಿಟ್ಟು ಉಳಿದೆರಡು ಪಕ್ಷಗಳು ಅಧಿಕಾರ ಹಂಚಿಕೊಂಡರು. ಇದು ನಡೆದಿದ್ದು ಇಂದಿರಾ ನಾಯಕತ್ವದ ಕಾಂಗ್ರೆಸ್ ಪಕ್ಷದ ನಾಯಕತ್ವದ ಕಾಲದಲ್ಲಿ. ಆದ್ದರಿಂದಾಗಿ ಮುಸ್ಲಿಂ ಲೀಗ್ ನಾಯಕರು 1976ರವರೆಗೂ ಕಾಯ್ದು ಆಗ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ನಾಯಕತ್ವದಲ್ಲಿ ರಚಿಸಿದ ಎಡರಂಗದಲ್ಲಿ ಮುಸ್ಲಿಂ ಲೀಗ್‌ಕೂಡ ಸೇರಿಕೊಂಡಿದ್ದೇ ಅಲ್ಲದೇ ಮೊಟ್ಟಮೊದಲ ಬಾರಿಗೆ ಮಂತ್ರಿಮಂಡಲದಲ್ಲಿ ಸ್ಥಾನವನ್ನೂ ಸಹ ಹಂಚಿಕೊಂಡರು".

"ವರ್ಗವೈಷಮ್ಯದಿಂದಾಗಿಯೋ, ಮತ್ತೊಂದು ಸಲ ಕೂಡ ಅವರು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ವಿರೋಧಿ ಬಣದಲ್ಲಿ ಅಂದರೆ ಕಾಂಗ್ರೆಸ್ ಪಕ್ಷದ ಜೊತೆಗೂಡಿ ಆಗಿನ ಎಡರಂಗ ಸರಕಾರವನ್ನು ಉರುಳಿಸುವ ಕಾರ್ಯದಲ್ಲಿ ಭಾಗಿಯಾದರು. ಆದರೂ ಮುಸ್ಲಿಂ ಲೀಗ್‌ನ ಒಂದು ವಿಭಾಗವು ಕಾಂಗ್ರೆಸ್ ಜೊತೆಗಿನ ಸಂಬಂಧದಿಂದ ತಾನು ಹಿಂದೆ ಕಲಿತಿದ್ದ ಪಾಠದಿಂದಾಗಿ ಅವರು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ನೇತೃತ್ವದಲ್ಲಿ ನಡೆದ ಎಡ ಮತ್ತು ಪ್ರಜಾಪ್ರಭುತ್ವ ರಂಗದಲ್ಲಿ ಈಗ ಸೇರಿದ್ದಾರೆ. ಮತ್ತು ಮಂತ್ರಿಮಂಡಲದಲ್ಲಿ ಸಹಾ ಇದ್ದಾರೆ. ಆದರೂ ಸಹ ಕಮ್ಯುನಿಸ್ಟ್ ಕಡು ವಿರೋಧಿಗಳ ಒಂದು ವಿಭಾಗದ ಮುಸ್ಲಿಂ ಲೀಗ್‌ನ್ನು ಇಂದಿರಾಗಾಂಧಿಯವರು ತನ್ನ ಜೊತೆಯಲ್ಲಿ ಇಟ್ಟುಕೊಂಡಿದ್ದಾರೆ. ಈಗ ಅವರು ಮುಸ್ಲಿಂರ ವಿರುದ್ಧ ಕೋಮು ಗಲಭೆಗಳಿಗೆ ಪ್ರೋತ್ಸಾಹ ನೀಡುತ್ತಿರುವ ಆರ್. ಎಸ್.ಎಸ್. ಜೊತೆಗೆ ಸೇರುವಂಥ ಪರಿಸ್ಥಿತಿ ಬಂದಿದೆ. ಇದಕ್ಕಿಂತ ಮುಖ್ಯ ವಿಷಯವೇನೆಂದರೆ ಯಾವ ದಿನ ಇಂದಿರಾಗಾಂಧಿಯವರು ಕ್ಯಾಲಿಕತ್‌ನಲ್ಲಿ ಆರ್.ಎಸ್.ಎಸ್.ನ ಹಿಂಸಾಕೃತ್ಯಗಳನ್ನು ಅಲ್ಲಗೆಳೆದು ಭಾಷಣ ಮಾಡಿದರೋ ಅಂದೇ ಆರ್.ಎಸ್.ಎಸ್.ನವರು ತಲಚೇರಿಯ ರೇಲ್ವೆ ನಿಲ್ದಾಣದಲ್ಲಿ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಶಾಸಕರ ಮೇಲೆ ದಾಳಿ ನಡೆಸಿದ್ದು. ಈ ಕೃತ್ಯದ ಬಗ್ಗೆ ಶ್ರೀಮತಿ ಗಾಂಧಿ ಕೃತ್ಯವನ್ನು ಖಂಡಿಸಿ ಒಂದೇ ಒಂದು ಮಾತು ಹೇಳಲಿಲ್ಲ. ಕೇರಳದಲ್ಲಿ ನಡೆಯುತ್ತಿರುವ ಹಿಂಸಾಚಾರಗಳ ಬಗ್ಗೆ ಪ್ರಧಾನಿಯವರ ಇಂತಹ ನಿಲುವಿನಿಂದಾಗಿ ಅಲ್ಲಿನ ಆರ್. ಎಸ್. ಎಸ್. ಮತ್ತು ನಕ್ಸಲೀಯರಿಗೆ ಹಿಂಸಾಕೃತ್ಯಗಳನ್ನು ಹೆಚ್ಚಿಸಲು ಕುಮ್ಮಕ್ಕು ಸಿಕ್ಕಂತಾಗಿದೆ. ಕೇರಳದ ಅಲ್ಪಸಂಖ್ಯಾತರು ಇಂದಿಗಾಂಧಿಯವರ ಪಕ್ಷದ ಬಗ್ಗೆ ಯಾವದೇ ರೀತಿಯ ನಂಬಿಕೆ ಇಡಲು ಸಾಧ್ಯವಿಲ್ಲ. ಏಕೆಂದರೆ ಅವರ ಪಕ್ಷ ಹಿಂಸಾಕೃತ್ಯಗಳನ್ನು ನಡೆಸುತ್ತಿರುವ ಆರ್.ಎಸ್.ಎಸ್.ನ ಜೊತೆ ಸಂಬಂಧ ಇಟ್ಟುಕೊಂಡಿದೆ. ಮತ್ತು ನಕ್ಸಲೀಯರಿಗೆ ಪರೋಕ್ಷ ಬೆಂಬಲವನ್ನು ಕೊಡುತ್ತದೆ.

○

ಪಿ.ಡಬ್ಲ್ಯುಡಿ ದಿನಗೂಲಿಗಳ ಮುಷ್ಕರ

ರಾಯಚೂರು ವಿಭಾಗದ ಎಕ್ಸಿಕ್ಯೂಟಿವ್ ಇಂಜಿನೀಯರರು ದಿನಾಂಕ 31-3-81ರಂದು ನಿವೃತರಾದರು. ನಿವೃತರಾಗುವ ಮುನ್ನ 4 ಜನ ದಿನಗೂಲಿಗಳನ್ನು ಖಾಯಂಮಾಡಿ ಆಜ್ಞೆಹೊರಡಿಸಿದ್ದರು. ಈ ದಿನಗೂಲಿಗಳನ್ನು ಸಿನೀಯಾರಿಟಿಮೇಲೆ ಖಾಯಂ ಮಾಡದೇ ಪಕ್ಷಪಾತದಿಂದ ಖಾಯಂ ಮಾಡಿದ್ದರು. ಈ ಅನ್ಯಾಯವನ್ನು ಪ್ರತಿಭಟಿಸಿ ಮುಷ್ಕರಹೂಡುವಂತೆ ಫೆಡರೇಶನ್ ಕರೆಕೊಟ್ಟಿತು. ಈ ಮೇರೆಗೆ ಕಾರ್ಮಿಕರು ರಾಯಚೂರು ವಿಭಾಗದ ಕೆಲಸನಿಲ್ಲಿಸಿ 1-3-81ರಂದು ರಾಯಚೂರಿನಲ್ಲಿ ಬಂದು ಸೇರಿದರು. ನಂತರ ಮೆರವಣಿಗೆ ಹೊರಟು ಅಧಿಕಾರಿಗಳನ್ನು ಕಂಡು ಪಕ್ಷಪಾತದ ಆಜ್ಞೆಯನ್ನು ವಾಪಸ್ಸು ಪಡೆಯಲು ವಿನಂತಿಸಲಾಯಿತು. ಅಧಿಕಾರಿಗಳು ಒಪ್ಪದ್ದರಿಂದ ಎರಡನೇಯ ದಿನವೂ ಮುಷ್ಕರ ಮುಂದುವರೆಯಿತು. ಇತರ ಸಹಕೆಲಸಗಾರರಾದ ವರ್ಕಚಾರ್ಜ್ಡ ಮತ್ತು ಡ್ರೈವರ್ಸ್ ಯೂನಿಯನ್‌ಗಳನ್ನು ಹೋರಾಟಕ್ಕೆ ಬೆಂಬಲಿಸುವಂತೆ ಕೇಳಿಕೊಳ್ಳಲಾಯಿತು. ಇಲಾಖೆಯ ಎಲ್ಲಾ ವಾಹನಗಳನ್ನು ತಡೆಹಿಡಿಯಲಾಯಿತು. ಮತ್ತು ಯಶಸ್ವಿಯಾಗಿ ಕೆಲಸನಿಲ್ಲಿಸಲಾಯಿತು. ಸುದ್ದಿ ತಿಳಿದ ಇತರ ಅಧಿಕಾರಿಗಳು ಬಂದು ಮಧ್ಯಸ್ತಿಕೆವಹಿಸಿದರು. ಮಾತುಕತೆಗಾಗಿ ಎ. ಇ. ಅವರು ಮೊದಲು ಇಲಾಖೆಯ ನೌಕರರನ್ನು ಮಾತ್ರ ಕರೆದರು. ಕಾರ್ಮಿಕರು ಒಪ್ಪದಿದ್ದಾಗ ಅಧಿಕಾರಿಗಳು ಮಣಿದು ಫೆಡರೇಶನ್ ನಾಯಕರ ಜೊತೆ ಚರ್ಚಿಸಿ, ಹೊರಡಿಸಿದ ಆಜ್ಞೆಯ ಪ್ರತಿ(COPY)ಯೊಂದನ್ನು ಫೆಡರೇಷನ್‌ಗೆ ತಲುಪಿಸಿದ ನಂತರ ಮುಷ್ಕರ ನಿಲ್ಲಿಸಲಾಯಿತು. ನಂತರ ನಡೆದ ಸಭೆಯನ್ನುದ್ದೇಶಿಸಿ ಫೆಡರೇಷನ್ ನಾಯಕರಾದ ಕಾಂ. ಎಚ್. ಗೋವಿಂದರೆಡ್ಡಿ, ಕಾಂ. ಪುರುಷೋತ್ತಮ ಮತ್ತು ಪ್ರಲ್ಹಾದಾಚಾರ್ ಮಾತನಡಿದರು. ನೌಕರರ ಮುಖ್ಯ ಬೇಡಿಕೆಯಾದ ಖಾಯಂಗೊಳಿಸುವ ಬಗ್ಗೆ ಹೋರಾಟಕ್ಕಿಳಿಯುವ ತೀರ್ಮಾನಕ್ಕೆಗೊಳ್ಳಲಾಯಿತು.

●

ಧಾರವಾಡ ಜಿಲ್ಲಾ ಸ್ಟೈಫಂಡರಿ ಪದವೀಧರರಿಂದ ಪಿಕೆಟಿಂಗ್ : ಪೋಲೀಸರಿಂದ ಬಂಧನ

"ಸ್ಟೈಫಂಡರಿ ಪದವೀಧರರನ್ನು ಕಾಯಂಗೊಳಿಸಲಾಗುವುದಿಲ್ಲ. ಅಲ್ಲದೇ ಯೋಜನೆಯನ್ನು 1982ಕ್ಕೆ ಕೊನೆಗೊಳಿಸಲಾಗುವುದು" ಸಚಿವ ಜಕನೂರರ ಈ ಹೇಳಿಕೆಯನ್ನು ಖಂಡಿಸಲು ಮತ್ತು ತಮ್ಮನ್ನು ಖಾಯಂಗೊಳಿಸಬೇಕೆಂದು ಸರಕಾರವನ್ನು ಒತ್ತಾಯಿಸಲು ದಿನಾಂಕ 10-4-81ರಂದು ಧಾರವಾಡ ಜಿಲ್ಲಾ ಕಚೇರಿ ಮುಂದೆ ಸ್ಟೈಫಂಡರಿ ಪದವೀಧರರು ಪಿಕೆಟಿಂಗ್ ನಡೆಸಿದರು.

ಜಿಲ್ಲಾಧಿಕಾರಿ ಕಛೇರಿಯ ಸುತ್ತ ಘೋಷಣೆ ಕೂಗುತ್ತಾ ಪಿಕೆಟಿಂಗ್ ನಡೆಸಿದ್ದರಿಂದು ಸುಮಾರು 1 ಘಂಟೆ ಹೊತ್ತು ಕಛೇರಿಯ ಕೆಲಸ ಸ್ಥಗಿತಗೊಂಡಿತ್ತು. ನಂತರ ಪಿಕೆಟಿಂಗ್ ಸ್ಥಳಕ್ಕೆ ಧಾವಿಸಿದ ಪೋಲೀಸರು ಸುಮಾರು 150 ಸ್ಟೈಫಂಡರಿ ಪದವೀಧರರನ್ನು ಬಂಧಿಸಿ ನಂತರ ಬಿಡುಗಡೆಮಾಡಿದರು.

ಸ್ಟೈಫಂಡರಿ ಪದವೀಧರರ ಹೋರಾಟದಲ್ಲಿ ಧಾರವಾಡ ಜಿಲ್ಲಾ ಡಿ.ವೈ.ಓ. ಪಾಲ್ಗೊಂಡಿತ್ತಲ್ಲದೇ, ಸದಸ್ಯರಾದ ಕಾಂ. ಎ. ಜಿ. ಕಮ್ಮಾರ, ಜಿ. ಎ. ಹಿರೇಮಠ, ಜಿ. ಸಿ. ವೈಮಠ, ಕಾಂ. ದೇಶಪಾಂಡೆ ಮೊದಲಾದವರು ಬಂಧನಕ್ಕೊಳಗಾಗಿದ್ದರು.

●

ಆರ್ಥಿಕ ಸಮೀಕ್ಷೆ:

16 ಮಿಲಿಯ ನಿರುದ್ಯೋಗಸ್ಥರು

ಆರ್. ಚಂದ್ರ

ಕೇಂದ್ರ ಕಾರ್ಮಿಕ ಮಂತ್ರಿ ಶಾಖೆಯ 1980-81ರ ವರದಿಯಂತೆ, ಭಾರತದಲ್ಲಿ ಉದ್ಯೋಗವಿನಿಮಯ ಸಂಸ್ಥೆಗಳಲ್ಲಿ ದಾಖಲಾದ ನಿರುದ್ಯೋಗಸ್ಥರ ಸಂಖ್ಯೆಯು ಡಿಸೆಂಬರ್ 1979ರಲ್ಲಿ 14.3 ಮಿಲಿಯ ದಷ್ಟಿದ್ದುದು, ಡಿಸೆಂಬರ್ 1980ರಲ್ಲಿ 16.2 ಮಿಲಿಯಕ್ಕೇರಿತು. ಅಂದರೆ, ಒಂದು ವರ್ಷದಲ್ಲಿ ನಿರುದ್ಯೋಗಸ್ಥರ ಸಂಖ್ಯೆಯು ಶೇ. 13ರಷ್ಟು ಏರಿತು!

ಉದ್ಯೋಗವಿನಿಮಯ ಸಂಸ್ಥೆಗಳ ಮೂಲಕ 1980ರಲ್ಲಿ ಕೇವಲ 4.78 ಲಕ್ಷ ಜನರಿಗೆ ಉದ್ಯೋಗ ದೊರಕಿಸಲಾಗಿತ್ತು. 1979ರಲ್ಲಿ ಕೇವಲ 4.66 ಲಕ್ಷ ಜನರಿಗೆ ಉದ್ಯೋಗ ದೊರಕಿಸಲಾಗಿತ್ತು. ಆದರೆ, ಒಂದು ವರ್ಷದಲ್ಲಿ ಹಿಂದಿನ ವರ್ಷಕ್ಕಿಂತ ಶೇ. 2.4ರಷ್ಟು ಹೆಚ್ಚು ಜನರಿಗೆ ಉದ್ಯೋಗ ದೊರಕಿಸಿದಂತಾಯಿತು. ನಿರುದ್ಯೋಗಸ್ಥರ ಸಂಖ್ಯೆಯು ಶೇ. 13ರ ದರದಲ್ಲಿ ಏರುತ್ತಿದ್ದು, ಹೊಸ ಉದ್ಯೋಗಪಡೆಯುವವರ ಸಂಖ್ಯೆಯು ಶೇ. 2.4 ದರದಲ್ಲಿ ಮಾತ್ರ ಏರುತ್ತಿದ್ದು, ಪ್ರತಿ ವರ್ಷವೂ ನಿರುದ್ಯೋಗಸ್ಥರ ಸಂಖ್ಯೆಯು ಹೆಚ್ಚುತ್ತಲೇ ಇದೆ. ದೇಶದ ಯುವಜನರ ಭವಿಷ್ಯ ಅತ್ಯಂತ ಚಿಂತಾಜನಕವಾಗಿದೆ.

1960ರಲ್ಲಿ ನಿರುದ್ಯೋಗಸ್ಥರ ಸಂಖ್ಯೆಯು 1.6 ಮಿಲಿಯದಷ್ಟಿದ್ದು, 1970ರಲ್ಲಿ 4 ಮಿಲಿಯಕ್ಕೇರಿತು, 1980ರಲ್ಲಿ 16 ಮಿಲಿಯಕ್ಕೂ ಮೀರಿತು. ಅಂದರೆ, ಎರಡು ದಶಕಗಳಲ್ಲಿ ನಿರುದ್ಯೋಗಸ್ಥರ ಸಂಖ್ಯೆಯು ಹತ್ತುಪಾಲು ಹೆಚ್ಚಾಯಿತು! ಹೀಗೆ ಮುಂದುವರಿದರೆ, ನಿರುದ್ಯೋಗಸ್ಥರ ಸಂಖ್ಯೆಯು 1985ರಷ್ಟರಲ್ಲಿ 30 ಮಿಲಿಯಕ್ಕೂ ಮೀರುವುದು, 1990ರಲ್ಲಿ 60 ಮಿಲಿಯಕ್ಕೂ ಮೀರುವುದು. ಉದ್ಯೋಗವಿನಿಮಯದಲ್ಲಿ ದಾಖಲೆ ಆಗದ ನಿರುದ್ಯೋಗಸ್ಥರೂ ಲಕ್ಷಾಂತರ ಸಂಖ್ಯೆಯಲ್ಲಿರುವುದನ್ನು ಗಮನಿಸಬೇಕು. ಇವರಲ್ಲಿ ಹೆಚ್ಚಿನವರು ಉದ್ಯೋಗವಿನಿಮಯಗಳಲ್ಲಿ ಹೆಸರು ದಾಖಲೆಮಾಡಲು ಪ್ರಾಯ ಮೀರಿದವರು ಮತ್ತು ಗ್ರಾಮೀಣ ಹಾಗೂ ಪೇಟೆಪಟ್ಟಣಗಳಲ್ಲಿರುವ ಬಡವರು, ದರಿದ್ರರು. ಒಂದೊಂದು ಪಂಚವಾರ್ಷಿಕ ಯೋಜನೆಯು ಮುಗಿಯುತ್ತಿದ್ದಂತೆಯೇ ನಿರುದ್ಯೋಗಸ್ಥರ ಸಂಖ್ಯೆಯು ಹೆಚ್ಚುತ್ತಿದ್ದು, ಬಂಡವಾಳಶಾಹಿ ಆರ್ಥಿಕ ಪದ್ಧತಿಯ ದಿವಾಳಿಕೋರತನವನ್ನು ಸ್ಪಷ್ಟಪಡಿಸುವುದು.

ನಿರುದ್ಯೋಗಸ್ಥರಲ್ಲಿ (ಉದ್ಯೋಗ ವಿನಿಮಯಗಳಲ್ಲಿ ಹೆಸರು ದಾಖಲೆ ಮಾಡಿದವರಲ್ಲಿ) ಸುಮಾರು ಶೇ. 45ರಿಂದ 50ರಷ್ಟು ವಿದ್ಯಾವಂತರು, ಅಂದರೆ ಹೈಸ್ಕೂಲು ಮತ್ತು ಹೆಚ್ಚಿನ ಮಟ್ಟದ ಶಿಕ್ಷಣಪಡೆದವರು. ವಿದ್ಯಾವಂತ ನಿರುದ್ಯೋಗಸ್ಥರ ಸಂಖ್ಯೆಯು ಜೂನ್ 1979ರಿಂದ ಜೂನ್ 1980ರ ಅವಧಿಯಲ್ಲಿ 69.37 ಲಕ್ಷಗಳಿಂದ 76.62 ಲಕ್ಷಗಳಿಗೇರಿದೆ. ಅಂದರೆ ಶೇ. 10.5ರಷ್ಟು ಹೆಚ್ಚಿದೆ. ಅವರಲ್ಲಿ 42.22 ಲಕ್ಷ ಜನರು ಹೈಸ್ಕೂಲ್ ವರೆಗೆ ಓದಿದವರು. 19.82 ಲಕ್ಷ ಜನರು ಪಿ.ಯು.ಸಿ.ವರೆಗೆ ಓದಿದವರು. ಮತ್ತು 14.58 ಲಕ್ಷ ಜನರು ಪದವೀಧರರು ಹಾಗೂ ಸ್ನಾತಕೋತ್ತರ ಪದವೀಧರರು. ಕಲಿತರೂ ಕೆಲಸವಿಲ್ಲ, ಕಲಿಯದಿದ್ದರೂ ಕೆಲಸವಿಲ್ಲ. ಎಂತಹ ವಿಪರಿಯಾಸ!

ಕಳೆದ ಒಂದು ವರ್ಷದಲ್ಲಿ ಬುಡಕಟ್ಟು ಜಾತಿಗಳಿಗೆ (S.C.) ಸೇರಿದ ನಿರುದ್ಯೋಗಸ್ಥರ ಸಂಖ್ಯೆಯು 15.78 ಲಕ್ಷಗಳಿಂದ 17.24 ಲಕ್ಷಗಳಿಗೇರಿತು. ಬುಡಕಟ್ಟು ಜನಾಂಗಗಳಿಗೆ (S.T.) ಸೇರಿದ ನಿರುದ್ಯೋಗಸ್ಥರ ಸಂಖ್ಯೆಯು 3.70 ಲಕ್ಷಗಳಿಂದ 4.48 ಲಕ್ಷಗಳಿಗೇರಿತು. ಅತ್ಯಂತ ಹಿಂದುಳಿದ ಈ ಜಾತಿಗಳ ಹಾಗೂ ಪಂಗಡಗಳ ಜನರಿಗೆ ಕಳೆದ ಮೂರು ದಶಕಗಳಿಂದಲೂ ಉದ್ಯೋಗಾವಕಾಶಗಳಲ್ಲಿ 'ಮೀಸಲಾತಿ' ಸೌಲಭ್ಯಗಳಿದ್ದರೂ, ಅವರಲ್ಲಿಯೂ ಲಕ್ಷಾಂತರ ಜನರು ನಿರುದ್ಯೋಗಸ್ಥರಾಗಿರುವುದನ್ನು ಗಮನಿಸಿದರೆ, ಮೀಸಲಾತಿಯಿಂದಾಗಿ ಅವರ ನಿರುದ್ಯೋಗ ಸಮಸ್ಯೆಯನ್ನು ಬಗೆಹರಿಸಲಿಕ್ಕಾಗಲಿಲ್ಲ. 'ಮೀಸಲಾತಿ' ಸೌಲಭ್ಯವನ್ನು ತೆಗೆದುಹಾಕಿದರೂ ಇತರ ಜಾತಿ ಮತ್ತು ಪಂಗಡಗಳ ಜನರಿಗೆ ಸಂಪೂರ್ಣ ಉದ್ಯೋಗ ಸಿಗುವ ಸಂಭವವೂ ಇಲ್ಲ. ಶತಮಾನಗಳಿಂದ ಸಾಮಾಜಿಕ, ಆರ್ಥಿಕ ಸಾಂಸ್ಕೃತಿಕವಾಗಿ ಶೋಷಣೆಗಳಿಗೆ ಒಳಗಾದ ಈ ದಲಿತ ಜನರಿಗೆ 'ಮೀಸಲಾತಿ' ಒಂದು ಸಾಂಕೇತಿಕ ಹಾಗೂ ತಾತ್ಕಾಲಿಕ ಪರಿಹಾರವೇ ಹೊರತು ಶಾಶ್ವತ ಪರಿಹಾರವಲ್ಲ. ಆದುದರಿಂದ 'ಮೀಸಲಾತಿ'ಯ ವಿರುದ್ಧವಾಗಿ ಗುಜರಾತ್ ಮತ್ತು ಇತರ ಕಡೆಗಳಲ್ಲಿ ನಡೆಯುತ್ತಿರುವ ಚಳುವಳವು ರಾಷ್ಟ್ರೀಯ ಐಕ್ಯತೆಗೆ ಧಕ್ಕೆ ತರುವುದು.

ನಿರುದ್ಯೋಗಸ್ಥ ಮಹಿಳೆಯರ ಸಂಖ್ಯೆಯೂ ಹೆಚ್ಚುತ್ತಿದೆ. ಕಳೆದ ಒಂದು ವರ್ಷದಲ್ಲಿ ಅವರ ಸಂಖ್ಯೆ 19.04 ಲಕ್ಷಗಳಿಂದ 23.45 ಲಕ್ಷಗಳಿಗೇರಿತು.

ನಿರುದ್ಯೋಗ ಸಮಸ್ಯೆಯು ಜಾತಿ, ಮತ, ಪಂಗಡಗಳ ಭೇದವಿಲ್ಲದೆ, ಸ್ತ್ರೀ-ಪುರುಷರೆಂಬ ವ್ಯತ್ಯಾಸವಿಲ್ಲದೆ, ಯಾವುದೇ ಒಂದು ಪ್ರದೇಶಕ್ಕೆ ಸೀಮಿತವಾಗಿರದೆ, ಸಮಸ್ತ ಜನಕೋಟಿಯ ದೊಡ್ಡ ಸಮಸ್ಯೆ ಆಗಿದೆ. ಸ್ವಾತಂತ್ರ್ಯ ನಂತರ ಬಂಡವಾಳಶಾಹಿ-ಭೂಮಾಲಿಕಪರವಾದ ಆರ್ಥಿಕ ನೀತಿಯನ್ನು ಅನುಸರಿಸಿಕೊಂಡು ಬಂದುದರಿಂದ ಇಂದು ಇಷ್ಟೊಂದು ಬೃಹತ್ ಪ್ರಮಾಣದ ನಿರುದ್ಯೋಗ ಸಮಸ್ಯೆಯನ್ನು ಎದುರಿಸಬೇಕಾಗಿದೆ. ಇಂತಹ ಆರ್ಥಿಕ ಪದ್ಧತಿಯಲ್ಲಿ ಬಂಡವಾಳಶಾಹಿಗಳಿಗೆ ಹಾಗೂ ಭೂಮಾಲಕರಿಗೆ ಅಗ್ಗದ ಕೂಲಿ ದರದಲ್ಲಿ ದುಡಿಯಲು ಸಾಕಷ್ಟು ಜನರು ಸಿಗಲು ಉದ್ದೇಶಪೂರ್ವಕವಾಗಿ ನಿರುದ್ಯೋಗಿಗಳ ಸೈನ್ಯವನ್ನೇ ಮೀಸಲಾಗಿರಿಸಿಕೊಳ್ಳಲಾಗುತ್ತಿದೆ. ಕಾರ್ಮಿಕರು, ನೌಕರರು ಸಂಘಟಿತರಾಗಿ ತಮ್ಮ ವೇತನ ಹಾಗೂ ಜೀವನಮಟ್ಟಕ್ಕಾಗಿ ಹೋರಾಡುತ್ತಿರುವಾಗ ನಿರುದ್ಯೋಗಿಗಳನ್ನು ಅವರ ವಿರುದ್ಧ ಎತ್ತಿಕಟ್ಟುವ ಪ್ರಯತ್ನ ನಡೆಯುತ್ತಿದೆ. ದೀರ್ಘಕಾಲ ಮುಷ್ಕರ ಹೋರಾಟಗಳು ನಡೆಯುವುದು ಕಷ್ಟವಾಗುತ್ತದೆ. ಖಾಯಂ ಕಾರ್ಮಿಕರನ್ನು, ನೌಕರರನ್ನು ಕೆಲಸದಿಂದ ಕಿತ್ತುಹಾಕಿ, ಕಡಿಮೆ ಸಂಬಳದಲ್ಲಿ ತಾತ್ಕಾಲಿಕವಾಗಿ ನಿರುದ್ಯೋಗಿಗಳನ್ನು ನೇಮಿಸಬಹುದು.

ಆದರೆ, ನಿರುದ್ಯೋಗಸ್ಥ ಯುವಕರು, ಮುಖ್ಯವಾಗಿ ವಿದ್ಯಾವಂತರು ಸಂಘಟಿತರಾಗಿ ಉದ್ಯೋಗ ಪಡೆಯುವುದು ತಮ್ಮ ಮೂಲಭೂತ ಹಕ್ಕು ಎಂದೂ, ಉದ್ಯೋಗ ದೊರಕುವ ತನಕ ತಮಗೆ ನಿರುದ್ಯೋಗ ಭತ್ಯೆ ಸಿಗಬೇಕೆಂದೂ ಹೋರಾಡಬೇಕು. ಉದ್ಯೋಗಸ್ಥರನ್ನೇ ತಾವು ಅವಲಂಭಿಸುತ್ತಿರುವುದರಿಂದ ಅವರ ವೇತನ ಹಾಗೂ ಜೀವನಮಟ್ಟ ಹೆಚ್ಚಳದ ಹೋರಾಟಗಳಿಗೆ ಸಕ್ರೀಯ ಬೆಂಬಲ ನೀಡಬೇಕು. ನಿರುದ್ಯೋಗ ಸಮಸ್ಯೆ ಪರಿಹಾರಕ್ಕಾಗಿ ಭೂಸುಧಾರಣೆ–ಉಳುವವನಿಗೇ ಹೊಲ ಗುತ್ತೇದಾರಿ ಕೈಗಾರಿಕಾ ಸಂಸ್ಥೆಗಳ ರಾಷ್ಟ್ರೀಕರಣ, ಬೆಲೆ ನಿಯಂತ್ರಣ, ಜೀವನಾವಶ್ಯಕ ವಸ್ತುಗಳ ಸಾಮಾಜಿಕ ವಿತರಣೆ, ವೃತ್ತಿಪರ ಶಿಕ್ಷಣ, ಇತ್ಯಾದಿ ಮೂಲಭೂತವಾದ ಆರ್ಥಿಕ ಬದಲಾವಣೆಗಳಿಗಾಗಿ ರೈತ-ಕಾರ್ಮಿಕ ಸಂಘಟನೆಗಳು ನಡೆಯಿಸುವ ಹೋರಾಟಗಳಿಗೆ ಬೆಂಬಲ ನೀಡಬೇಕು. ಕೇರಳದ ಎಡ-ಪ್ರಜಾಪ್ರಭುತ್ವವಾದಿರಂಗ ಹಾಗೂ ಪಶ್ಚಿಮ ಬಂಗಾಳದ ಎಡರಂಗ ಸರಕಾರಗಳು ನಿರುದ್ಯೋಗಿಗಳಿಗೆ ಸಾಂಕೇತಿಕ ಭತ್ಯೆಯನ್ನು ನೀಡುತ್ತಿರುವಂತೆ, ಸಂವಿಧಾನದಲ್ಲಿ ಆಶ್ವಾಸನೆ ನೀಡಿದಂತೆ ಇತರ ರಾಜ್ಯಗಳಲ್ಲಿಯೂ ನಿರುದ್ಯೋಗ ಭತ್ಯೆಯನ್ನು ನೀಡುವಂತೆ ಯುವಜನರು ಸಂಘಟಿತರಾಗಿ ರಾಜ್ಯ ಹಾಗೂ ಕೇಂದ್ರ ಸರಕಾರಗಳಿಗೆ ಒತ್ತಾಯಿಸಬೇಕು.

ಅಧ್ಯಾಪಕರಿಲ್ಲದ ೨೯೦೦ ಪ್ರಾಥಮಿಕ ಶಾಲೆಗಳು

ರಾಷ್ಟ್ರೀಯ ಶೈಕ್ಷಣಿಕ ಅಧ್ಯಯನ ಹಾಗೂ ತರಬೇತಿ ಮಂಡಳಿಯ (NEERT) ಇತ್ತೀಚಿಗಿನ ವರದಿಯಂತೆ, ದೇಶಾದ್ಯಂತ 2937 ಪ್ರಾಥಮಿಕ ಶಾಲೆಗಳಲ್ಲಿ ಅಧ್ಯಾಪಕರೇ ಇಲ್ಲವೆಂದು ತಿಳಿದುಬಂದಿದೆ. ಕರ್ನಾಟಕದಲ್ಲಿಯೇ ಅಧ್ಯಾಪಕರಿಲ್ಲದ 381 ಪ್ರಾಥಮಿಕ ಶಾಲೆಗಳಿವೆಯಂತೆ! ಉ. ಪ್ರದೇಶದಲ್ಲಿಯೇ ಅಧ್ಯಾಪಕರಿಲ್ಲದ ಪ್ರಾಥಮಿಕ ಶಾಲೆಗಳ ಸಂಖ್ಯೆ 600 ರಷ್ಟಿದೆ!

ಇತರ ರಾಜ್ಯಗಳಲ್ಲಿ ಅಧ್ಯಾಪಕರಿಲ್ಲದ ಪ್ರಾಥಮಿಕ ಶಾಲೆಗಳ ಸಂಖ್ಯೆ ಹೀಗಿವೆ: ಬಿಹಾರ: 497; ಮಧ್ಯಪ್ರದೇಶ: 411; ಆಂಧ್ರಪ್ರದೇಶ: 292; ಒರಿಸ್ಸಾ: 243; ಮಹಾರಾಷ್ಟ್ರ: 115; ತಮಿಳುನಾಡು: 104; ರಾಜಸ್ಥಾನ: 96; ಗುಜರಾತ್: 68; ಇತರ ರಾಜ್ಯಗಳು ಹಾಗೂ ಕೇಂದ್ರಾಡಳಿತ ಪ್ರದೇಶಗಳು: 230.

ದೇಶದಲ್ಲಿ ಒಂದೇ ಅಧ್ಯಾಪಕರಿರುವ ಪ್ರಾಥಮಿಕ ಶಾಲೆಗಳ ಒಟ್ಟು ಸಂಖ್ಯೆ: 164931. ಇಂತಹ ಶಾಲೆಗಳ ರಾಜ್ಯವಾರು ಸಂಖ್ಯೆ ಹೀಗಿದೆ: ಮಧ್ಯಪ್ರದೇಶ: 25201; ಆಂಧ್ರಪ್ರದೇಶ: 21544; ಮಹಾರಾಷ್ಟ್ರ: 17827; ಬಿಹಾರ: 17085; ಕರ್ನಾಟಕ: 16341; ಒರಿಸ್ಸಾ: 14698; ರಾಜಸ್ಥಾನ: 11978. ಇತರ ರಾಜ್ಯಗಳಲ್ಲಿ ಮತ್ತು ಕೇಂದ್ರಾಡಳಿತ ಪ್ರದೇಶಗಳಲ್ಲಿ 9ರಲ್ಲಿ ಹತ್ತು ಸಾವಿರದೊಳಗೆ, 6ರಲ್ಲಿ ಒಂದು ಸಾವಿರದೊಳಗೆ ಮತ್ತು 6ರಲ್ಲಿ ಒಂದು ನೂರರ ಒಳಗೆ ಒಟ್ಟು 40,000. ಏಕೋಪಾಧ್ಯಾಯ ಶಾಲೆಗಳು ಒಟ್ಟು ಪ್ರಾಥಮಿಕ ಶಾಲೆಗಳ ಶೇ. 34.5ರಷ್ಟಿವೆ!

ಎರಡೇ ಅಧ್ಯಾಪಕರಿರುವ ಪ್ರಾಥಮಿಕ ಶಾಲೆಗಳ ಒಟ್ಟು ಸಂಖ್ಯೆ 129451. ಇಂತಹ ಶಾಲೆಗಳು ಅನುಕ್ರಮವಾಗಿ ಮಧ್ಯಪ್ರದೇಶ, ಬಿಹಾರ ಮತ್ತು ಕರ್ನಾಟಕ ರಾಜ್ಯಗಳಲ್ಲಿ ಅತ್ಯಧಿಕವಾಗಿದೆ.

ಮೂರು ಅಧ್ಯಾಪಕರಿರುವ ಪ್ರಾಥಮಿಕ ಶಾಲೆಗಳ ಸಂಖ್ಯೆ 71658. ನಾಲ್ಕು ಅಧ್ಯಾಪಕರಿರುವ ಪ್ರಾಥಮಿಕ ಶಾಲೆಗಳ ಸಂಖ್ಯೆ 38726 ಮತ್ತು ಐದು ಅಧ್ಯಾಪಕರಿರುವ ಪ್ರಾಥಮಿಕ ಶಾಲೆಗಳ ಸಂಖ್ಯೆ 24908.

ದೇಶದ ಒಟ್ಟು 474636 ಪ್ರಾಥಮಿಕ ಶಾಲೆಗಳಲ್ಲಿ ಕೇವಲ ಶೇ. 9 ರಷ್ಟು ಶಾಲೆಗಳಲ್ಲಿ ಐದಕ್ಕಿಂತಲೂ ಹೆಚ್ಚು ಅಧ್ಯಾಪಕರಿರುತ್ತಾರೆ. ರಾಷ್ಟ್ರೀಯ ಮಟ್ಟದಲ್ಲಿ ಪ್ರತಿಯೊಬ್ಬ ಅಧ್ಯಾಪಕನಿಗೆ ಸರಾಸರಿ 41 ಪ್ರಾಥಮಿಕ ವಿದ್ಯಾರ್ಥಿಗಳೂ, 25 ಪ್ರೌಢ ಪ್ರಾಥಮಿಕ ವಿದ್ಯಾರ್ಥಿಗಳೂ, 18 ಹೈಸ್ಕೂಲ್ ಹಾಗೂ ಮೇಲ್ಪರಗತಿಯ ವಿದ್ಯಾರ್ಥಿಗಳೂ ಇರುವರೆಂದು ತಿಳಿದುಬಂದಿದೆ.

ಒಂದೆಡೆ ಅಸಂಖ್ಯಾತ ವಿದ್ಯಾವಂತ ನಿರುದ್ಯೋಗಸ್ಥರಿರುವಾಗ, ಇನ್ನೊಂದೆಡೆ ಶಾಲೆಗಳಲ್ಲಿ ಅಧ್ಯಾಪಕರಿಲ್ಲ, ಆಸ್ಪತ್ರೆಗಳಲ್ಲಿ ಡಾಕ್ಟರರಿಲ್ಲ ದಾದಿಯರಿಲ್ಲ, ಕಚೇರಿಗಳಲ್ಲಿ ಗುಮಾಸ್ತರಿಲ್ಲ, ಬ್ಯಾಂಕು ಜೀವವಿಮೆ ಮುಂತಾದ ಸಾರ್ವಜನಿಕ ಸಂಸ್ಥೆಗಳಲ್ಲಿ ಹಲವು ವರ್ಷಗಳಿಂದ ಉದ್ಯೋಗಾವಕಾಶಗಳಿಲ್ಲ ಇದ್ದರೂ ತೀರಾ ವಿರಳ. ಖಾಸಗೀ ಕೈಗಾರಿಕಾ ಸಂಸ್ಥೆಗಳಲ್ಲಿ ಈಗ 15 ವರ್ಷಗಳಿಂದ ಉದ್ಯೋಗಾವಕಾಶಗಳು ಹೆಚ್ಚಲೇ ಇಲ್ಲ. ಮರಣ, ನಿವೃತ್ತಿ, ರಾಜಿನಾಮೆ, ವರ್ಗಾವಣೆಗಳಿಂದಾಗಿ ಉಂಟಾದ ಖಾಲಿ ಜಾಗಗಳಿಗೂ ಹೆಚ್ಚಿನ ಸಂಸ್ಥೆಗಳಲ್ಲಿ ಸಕಾಲದಲ್ಲಿ ಹೊಸ ನೇಮಕವಾಗುತ್ತಿಲ್ಲ.

ಶಿಕ್ಷಣಕ್ಷೇತ್ರವನ್ನೇ ಮರುಪರಿಶೀಲಿಸಿದಾಗ, ಪ್ರಾಥಮಿಕ ಶಿಕ್ಷಣವನ್ನು ಸರಕಾರವು ಉದ್ದೇಶಪೂರ್ವಕವಾಗಿ ಅಲಕ್ಷಿಸಿದೆ. ಪ್ರಾಥಮಿಕ ಶಾಲೆಗಳಿಗೆ ಅಧ್ಯಾಪಕರಿಲ್ಲ, ಕಟ್ಟಡಗಳಿಲ್ಲ, ಬೆಂಚು ಕುರ್ಚಿಗಳ ಸೌಲಭ್ಯಗಳಿಲ್ಲ, ಆಟದ ಮೈದಾನಗಳಿಲ್ಲ. ದೇಶದ 1981ರ ಜನಗಣತಿಯಂತೆ, 68 ಕೋಟಿ ಜನಸಂಖ್ಯೆಯಲ್ಲಿ ಕೇವಲ ಶೇ. 35ರಷ್ಟೇ ಇನ್ನೂ ಅಕ್ಷರಸ್ಥರು, ಶೇ. 65ರಷ್ಟು ನಿರಕ್ಷರಸ್ಥರು. ಪ್ರಾಥಮಿಕ ಶಿಕ್ಷಣ ಹಾಗೂ ವಯಸ್ಕರ ಶಿಕ್ಷಣಕ್ಕೆ ಏನೇನೂ ಗಮನಕೊಡಲಾಗುತ್ತಿಲ್ಲ.

ಕರ್ನಾಟಕ ರಾಜ್ಯ ಒಂದರಲ್ಲಿಯೇ ಅಧ್ಯಾಪಕರೇ ಇಲ್ಲದಿರುವ 381 ಶಾಲೆಗಳಿಗೆ ಒಬ್ಬ ಅಧ್ಯಾಪಕನನ್ನು ನೇಮಿಸುವುದರಿಂದ, 16341 ಏಕೋಪಾಧ್ಯಾಯ ಶಾಲೆಗಳಿಗೆ ಇನ್ನೊಬ್ಬ ಅಧ್ಯಾಪಕನನ್ನು ನೇಮಿಸುವುದರಿಂದ, ಸುಮಾರು 17,000 ವಿದ್ಯಾವಂತರಿಗೆ ಉದ್ಯೋಗ ದೊರಕಿಸಬಹುದು. ಶಿಕ್ಷಕ ತರಬೇತಿಯಾದವರು ರಾಜ್ಯದಲ್ಲಿ ಸಾವಿರಾರು ತರುಣರಿದ್ದಾರೆ. ಅವರಿಗೆ ಹೊಸ ಉದ್ಯೋಗಾವಕಾಶ ನೀಡಬಹುದು. ಕೇರಳ, ಪ. ಬಂಗಾಳ, ತಮಿಳನಾಡು, ಮಹಾರಾಷ್ಟ್ರ ರಾಜ್ಯಗಳಿಗೆ ಹೋಲಿಸಿದರೆ, ಕರ್ನಾಟಕ ರಾಜ್ಯ ಪ್ರಾಥಮಿಕ ಶಿಕ್ಷಣದಲ್ಲಿ ಎಲ್ಲಾ ವಿಧದಲ್ಲಿ ಹಿಂದುಳಿದಿರುವುದನ್ನು ಗಮನಿಸಬಹುದು.

ಬಂಡವಾಳಶಾಹಿ ಆರ್ಥಿಕ ಪದ್ಧತಿಯಲ್ಲಿ ಶಿಕ್ಷಣ, ಆರೋಗ್ಯ, ವಸತಿ, ಉದ್ಯೋಗ ಇವುಗಳಿಗೆ ಹೆಚ್ಚು ಪ್ರಾಶಸ್ತ್ಯ ದೊರೆಯದು. ಬದಲು, ಪೋಲೀಸ್ ಮಿಲಿಟರಿ ಸಿಬ್ಬಂದಿಗಳ ಮತ್ತು ಮೇಲಾಧಿಕಾರಿಗಳ ಸಂಖ್ಯೆ ಮಾತ್ರ ವೃದ್ಧಿಯಾಗುತ್ತಿರುವುದು.

ಸಿ.ಐ.ಟಿ.ಯು.ವಿನ ಮೇ ದಿನದ ಪ್ರಣಾಳಿಕೆ

ಮೇ ಒಂದು : ಅಂತರಾಷ್ಟ್ರೀಯ ಶ್ರಮಿಕರ ಸೌಹಾರ್ದದ ದಿನ. ಈ ಮಹಾನ್ ದಿನದಂದು, ಸಮಾಜವಾದ ಮತ್ತು ವಿಶ್ವಶಾಂತಿಗೋಸ್ಕರ ಪ್ರಾಣಾರ್ಪಣೆ ಮಾಡಿದ ಹುತಾತ್ಮರಿಗೆ ಸಿ. ಐ. ಟಿ. ಯು. ಗೌರವಪೂರ್ಣ ಶ್ರದ್ಧಾಂಜಲಿಯನ್ನರ್ಪಿಸುತ್ತದೆ.

ಈ ಸಂದರ್ಭದಲ್ಲಿ ಪ್ರಪಂಚದಾದ್ಯಂತ ಸಾಮ್ರಾಜ್ಯಶಾಹಿಯ ವಿರುದ್ಧ, ವರ್ಣಭೇಧ ನೀತಿಯ ವಿರುದ್ಧ, ಜಿಯೋನಿಸಂ ವಿರುದ್ಧ ಧೀರ್ಘಕಾಲದ ಪ್ರಭಲ ಹೋರಾಟಗಳನ್ನು ನಡೆಸುತ್ತಿರುವ ಜಗತ್ತಿನ ಕಾರ್ಮಿಕ ವರ್ಗಕ್ಕೆ ಮತ್ತು ದುಡಿಯುವ ಜನತೆಗೆ ಸಿ. ಐ. ಟಿ.ಯು. ಹಾರ್ದಿಕ ಶುಭಾಶಯಗಳನ್ನು ಸಲ್ಲಿಸುತ್ತದೆ. ಸಮಾಜವಾದೀ ದೇಶಗಳ ಜನತೆ ಮತ್ತು ಕಾರ್ಮಿಕ ವರ್ಗಕ್ಕೆ ಸಿ. ಐ. ಟಿ. ಯು. ತನ್ನ ಭಾತೃಪೂರಿತ ಶುಭಾಶಯಗಳನ್ನು ಅರ್ಪಿಸುತ್ತದೆ. ಸಮಾಜವಾದೀ ಪದ್ಧತಿಯ ನಿರ್ಮಾಣದಲ್ಲಿ, ಉತ್ತಮ ಜೀವನಮಟ್ಟವನ್ನು ತಲುಪುವಲ್ಲಿ, ನಿರುದ್ಯೋಗವನ್ನು ಕೊನೆಗಾಣಿಸುವಲ್ಲಿ ಅವರು ಸಾಧಿಸಿರುವ ಅದ್ಭುತ ವಿಜಯಗಳಿಗಾಗಿ ಸಿ.ಐ.ಟಿ.ಯು. ಅವರನ್ನು ಅಭಿನಂದಿಸುತ್ತದೆ. ಈ ದೇಶಗಳು ಅಭಿವೃದ್ಧಿ ಹೊಂದುತ್ತಿರುವ ದೇಶಗಳಿಗೆ ಕೊಟ್ಟ ಬೆಂಬಲ, ಸಾಮ್ರಾಜ್ಯಶಾಹೀ ಮತ್ತು ನವವಸಾಹತುಶಾಹಿ ಶೋಷಣೆಯ ವಿರುದ್ಧ ಮತ್ತು ರಾಷ್ಟ್ರೀಯ ಸ್ವಾವಲಂಬನೆಗಾಗಿ ಆ ದೇಶಗಳು ಹೋರಾಡಲು ಸಹಾಯಮಾಡಿದೆ. ಈ ಮೇ ದಿನದಂದು ಕಾರ್ಮಿಕವರ್ಗದ ಅಂತರಾಷ್ಟ್ರೀಯತೆಯ ನಿಶಾನೆಯನ್ನು ಧೃಡವಾಗಿ ಎತ್ತಿಹಿಡಿದು ಸಿ.ಐ.ಟಿ.ಯು. ಪೋಲಂಡಿನಲ್ಲಿ ಸಮಾಜವಾದೀ ಪದ್ಧತಿಯನ್ನು ಬುಡಮೇಲು ಮಾಡುವ ಸಾಮ್ರಾಜ್ಯಶಾಹೀ ಪಿತೂರಿಯನ್ನು ಖಂಡಿಸುತ್ತದೆ. ಮತ್ತು ಈ ಪಿತೂರಿಯನ್ನು ಸೋಲಿಸಲು ನಡೆಯುವ ಎಲ್ಲ ಪ್ರಯತ್ನಗಳನ್ನು ಅಚಲವಾಗಿ ಬೆಂಬಲಿಸುತ್ತದೆ.

ಬಂಡವಾಳಶಾಹೀ ದೇಶಗಳಲ್ಲಿ ತಮ್ಮ ಜೀವನ ಮಟ್ಟಗಳ ರಕ್ಷಣೆಗಾಗಿ ಹಾಗೂ ನಿರುದ್ಯೋಗದ ವಿರುದ್ಧ ಉಗ್ರ ಸಮರಗಳನ್ನು ನಡೆಸಿರುವ ಕಾರ್ಮಿಕವರ್ಗವನ್ನು ಸಿ.ಐ.ಟಿ.ಯು. ಅಭಿನಂದಿಸುತ್ತದೆ. ಅಭಿವೃದ್ಧಿಶೀಲ ದೇಶಗಳನ್ನು ಕೊಳ್ಳೆ ಹೊಡೆದೂ ಸಹ ಬಂಡವಾಳಶಾಹೀ ದೇಶಗಳ ಏಕಸ್ವಾಮ್ಯಗಳು ಮತ್ತು ಬಹುರಾಷ್ಟ್ರೀಯ ಸಂಸ್ಥೆಗಳು ಕಾರ್ಮಿಕರ ಮೇಲೆ ದಾಳಿಗಳನ್ನು ನಡೆಸುತ್ತಿವೆ. ಕಳೆದ ಎರಡು ವರ್ಷಗಳಲ್ಲಿ ಅಮೇರಿಕದ ಸಂಯುಕ್ತ ಸಂಸ್ಥಾನಗಳಲ್ಲಿ ನಿಜವೇತನವು ಶೇಕಡ 10ಕ್ಕಿಂತಲೂ ಹೆಚ್ಚು ಇಳುಮರಿಯಾಗಿದೆ. ಅಮೇರಿಕದ ಸಂಯುಕ್ತ ಸಂಸ್ಥಾನಗಳು, ಬ್ರಿಟನ್ ಮತ್ತು ಹೆಚ್ಚು ಕಡಿಮೆ ಈ ಎಲ್ಲಾ ದೇಶಗಳಲ್ಲಿ ನಿರುದ್ಯೋಗವು ಹಿಂದೆ ಎಲ್ಲೂ ಇಲ್ಲದಷ್ಟು ಹೆಚ್ಚಾಗಿದೆ. ನಿರುದ್ಯೋಗದ ವಿರುದ್ಧ ಮತ್ತು ಉತ್ತಮ ಜೀವನ ಮಟ್ಟಕ್ಕಾಗಿ ಅಲ್ಲಿನ ಕಾರ್ಮಿಕರು ನಡೆಸುವ ಹೋರಾಟಗಳಿಗೆ ಸಿ.ಐ.ಟಿ.ಯು. ತನ್ನ ಸಂಪೂರ್ಣ ಬೆಂಬಲವನ್ನು ಕೊಡುತ್ತದೆ.

ಭಾರತದ ಕಾರ್ಮಿಕವರ್ಗವು ತಮ್ಮ ದುಡಿಮೆಯ ಪರಿಸ್ಥಿತಿ ಮತ್ತು ಜೀವನ ಪರಿಸ್ಥಿತಿಯನ್ನು ರಕ್ಷಿಸಿಕೊಳ್ಳಲು, ಸಾಮೂಹಿಕ ಚೌಕಾಶಿಯ ಹಕ್ಕನ್ನು ರಕ್ಷಿಸಿಕೊಳ್ಳಲು ನಡೆಸಿದ ಧೃಢವಾದ ಐಕ್ಯಹೋರಾಟಗಳಿಗೆ ನೇತೃತ್ವಕೊಟ್ಟ ಕೇಂದ್ರ ಕಾರ್ಮಿಕಸಂಘಟನೆಗಳಿಗೆ ಮತ್ತು ರಾಷ್ಟ್ರೀಯ ಒಕ್ಕೂಟಗಳಿಗೆ ಮತ್ತು ಭಾರತದ ಕಾರ್ಮಿಕವರ್ಗಕ್ಕೆ ಸಿ.ಐ.ಟಿ.ಯು. ಹಾರ್ದಿಕ ಶುಭಾಶಯಗಳನ್ನು ಸಲ್ಲಿಸುತ್ತದೆ. ಶ್ರೀಮತಿ ಇಂದಿರಾಗಾಂಧೀಯವರ ನೇತೃತ್ವದಲ್ಲಿರುವ ಕಾಂಗ್ರೆಸ್ (ಐ) ಸರಕಾರದ ದಮನಕಾರೀ ಕ್ರಮಗಳ ವಿರುದ್ಧ ಉದ್ಯೋಗಪತಿಗಳ ಬಾಡಿಗೆಯ ಗೂಂಡಾಗಳ ವಿರುದ್ಧ, ಕಾಂಗ್ರೈ, ಆರ್.ಎಸ್.ಎಸ್. ಮತ್ತು ನಕ್ಸಲೀಯ ಪುಂಡರು ನಡೆಸುತ್ತಿರುವ ದುಷ್ಟ ದಾಳಿಗಳನ್ನು ಧೈರ್ಯದಿಂದ ಎದುರಿಸುತ್ತಿರುವ ಪ. ಬಂಗಾಲ, ಕೇರಳ, ಹರಿಯಾಣಾ ಮತ್ತು ಇತರ ರಾಜ್ಯಗಳ ಕಾರ್ಮಿಕವರ್ಗಕ್ಕೆ ಮತ್ತು ಇತರ ದುಡಿಯುವ ಜನತೆಗೆ ಸಿ.ಐ.ಟಿ.ಯು. ವಿಶೇಷವಾದ ಶುಭಾಶಯಗಳನ್ನು ಸಲ್ಲಿಸುತ್ತದೆ.

ದೇಶಾದ್ಯಂತ ಬೆಲೆ ಏರಿಕೆಯ ವಿರುದ್ಧ ಮತ್ತು ತಮ್ಮ ಬೆಳೆಗಳಿಗೆ ಲಾಭದಾಯಕ ಬೆಲೆಗಳಿಗಾಗಿ ಹೋರಾಟ ನಡೆಸಿದ ರೈತ ಸಮುದಾಯಕ್ಕೆ ಮತ್ತು ಕೃಷಿ ಕಾರ್ಮಿಕರಿಗೆ ಮತ್ತು ಈ ಹೋರಾಟಗಳಿಗೆ ನೇತೃತ್ವ ಕೊಟ್ಟ ರೈತ ಸಂಘಟನೆಗಳಿಗೆ ಸಿ.ಐ.ಟಿ.ಯು. ತನ್ನ ಭಾತೃಪೂರಿತ ಶುಭಾಶಯಗಳನ್ನು ಸಲ್ಲಿಸುತ್ತದೆ. ಕೇವಲ ಕೆಲವೇ ಜಮೀನ್ದಾರರು ಮತ್ತು ಶ್ರೀಮಂತ ರೈತರು ಗಲಭೆಯನ್ನು ಸೃಷ್ಟಿಸುತ್ತಿದ್ದಾರೆ. ಕಾಂಗ್ರೈ ಸರಕಾರ ರೈತರ ಏಳಿಗೆಗಾಗಿ ಮಾಡಬೇಕಾದುದನ್ನು ಎಲ್ಲವನ್ನೂ ಮಾಡುತ್ತಿವೆ ಎಂದು ಕಾಂಗ್ರೈ ಆಳರಸರು ಮಾಡುತ್ತಿರುವ ಪ್ರಚಾರವನ್ನು ಕೊಚ್ಚುತ್ತಿರುವ ಬಡಾಯಿಯನ್ನು ಸುಳ್ಳುಮಾಡಿದ, ಎಲ್ಲ ವಿಧವಾದ ಕಷ್ಟಗಳನ್ನು ಸಹಿಸಿ ನಿರ್ಬಂಧಗಳನ್ನು ತೊಡೆದು, ದಾಳಿಗಳನ್ನು ಎದುರಿಸಿ 1981 ಮಾ. 26ರಂದು ರಾಜಧಾನಿ (ದೆಹಲಿ)ಯಲ್ಲಿ ಸಮಾವೇಶಗೊಂಡ ಪ್ರಚಂಡ ಜನಸ್ತೋಮಕ್ಕೂ ಮತ್ತು ಪಾಲ್ಗೊಂಡವರೆಲ್ಲರಿಗೂ ಸಿ.ಐ.ಟಿ.ಯು. ಹಾರ್ದಿಕ ಶುಭಾಶಯಗಳನ್ನು ಸಲ್ಲಿಸುತ್ತದೆ. ದೆಹಲಿ, ಘಾಜಿಯಾಬಾದ್, ಫರೀದಾಬಾದ್, ಸೊನೆಪಟ್, ಬೆಂಗಳೂರು ಮತ್ತು ದೇಶದ ಇತರ ಭಾಗಗಳಲ್ಲಿ ಮುಷ್ಕರಗಳನ್ನು ನಡೆಸುವ ಮೂಲಕ ರೈತರ ಹೋರಾಟಗಳಿಗೆ ಬೆಂಬಲವನ್ನು ಸೂಚಿಸುವುದರ ಮೂಲಕ ದೇಶದಲ್ಲಿ ಕಾರ್ಮಿಕ-ರೈತರ ಸಖ್ಯತೆಯ ಒಂದು ಹೊಸ ಅಧ್ಯಾಯವನ್ನು ಪ್ರಾರಂಭಿಸಿದ ಕಾರ್ಮಿಕ ವರ್ಗಕ್ಕೆ ವಿಶೇಷವಾದ ಅಭಿನಂದನೆ ಸಲ್ಲಿಸುತ್ತದೆ.

ಸಾಮ್ರಾಜ್ಯಶಾಹೀ ಪಿತೂರಿ:

ಅಂತರಾಷ್ಟ್ರೀಯ ಪರಿಸ್ಥಿತಿ ಹದಗೆಡುತ್ತಿರುವ, ಯುದ್ಧದ ಅಪಾಯವು ಹೆಚ್ಚುತ್ತಿರುವ ಪ್ರಸ್ತುತ ಪರಿಸ್ಥಿತಿಯಲ್ಲಿ ಈ ಮೇದಿನ ಆಗಮಿಸಿದೆ. ಅಮೇರಿಕದ ಸಾಮ್ರಾಜ್ಯಶಾಹಿಗಳು ಆಕ್ರಮಣಶೀಲ ಧಾಟಿಯಲ್ಲಿ ವಿಪರೀತವಾಗಿ ಶಸ್ತ್ರಾಸ್ತ್ರ ಸಂಗ್ರಹಮಾಡುತ್ತಾ ಜಾಗತಿಕ ಶಾಂತಿಗೆ ಅಪಾಯವನ್ನುಂಟುಮಾಡುತ್ತಲಿದ್ದಾರೆ. ಅವರು ಸೋವಿಯೆತ್ ಒಕ್ಕೂಟದ ವಿರುದ್ಧ ಮತ್ತು ಸಮಾಜವಾದಿ ಶಿಬಿರದ ವಿರುದ್ಧ ಯುದ್ಧೋನ್ಮಾದವನ್ನು ಹಬ್ಬಿಸುತ್ತಿದ್ದಾರೆ. ಆಫ್ರಿಕಾ ಮತ್ತು ಲ್ಯಾಟೀನ್ ಅಮೇರಿಕಾಗಳಲ್ಲಿ ಬೆಳೆಯುತ್ತಿರುವ ಕ್ರಾಂತೀಕಾರಿ ಮತ್ತು ರಾಷ್ಟ್ರೀಯ ಸ್ವಾತಂತ್ರ್ಯ ಚಳುವಳಿಗಳನ್ನು ಸದೆಬಡಿಯಲು ಅವರು ತಮ್ಮ ಕೈಲಾದುದೆಲ್ಲವನ್ನೂ ಮಾಡುತ್ತಲಿದ್ದಾರೆ. ಅವರು ಭಾರತದಂತ ದೇಶಗಳ ಸ್ವಾತಂತ್ರ್ಯಕ್ಕೆ ಅಪಾಯ ಒಡ್ಡುತ್ತಿದ್ದಾರೆ. ಪಾಕೀಸ್ತಾನದಲ್ಲಿರುವ ಸರ್ವಾಧಿಕಾರೀ ಆಳಿಕೆಗೆ ಅಮೇರಿಕದ ಸಾಮ್ರಾಜ್ಯಶಾಹಿಗಳು ವಿಪರೀತವಾಗಿ ಶಸ್ತ್ರಾಸ್ತ್ರಗಳನ್ನು ಸರಬರಾಜುಮಾಡಿ ಯುದ್ಧಕ್ಕೆ ಸಜ್ಜುಗೊಳಿಸುತ್ತಿರುವುದರಿಂದ ಮತ್ತು ಹಿಂದೂ ಮಹಾಸಾಗರದಲ್ಲಿ ಈ ಸಾಮ್ರಾಜ್ಯಶಾಹಿಗಳ ನೌಕಾಪಡೆಯ ಪ್ರಾಭಲ್ಯ ಹೆಚ್ಚುತ್ತಿರುವುದರಿಂದ ನಮ್ಮ ಉಪಖಂಡದಲ್ಲಿ ಯುದ್ಧದ ಅಪಾಯ ಹೆಚ್ಚುತ್ತಿದೆ. ಇರಾನಿನಲ್ಲಿ ಅವರ ಸಂಚು ವಿಫಲವಾದ ನಂತರ ಪಶ್ಚಿಮ ಏಷ್ಯಾದಲ್ಲಿ ಹೊಸ ಸಂಚುಗಳನ್ನು ನಡೆಸಿ ಕೊಲ್ಲಿ (gulf) ರಾಷ್ಟ್ರಗಳು ಯುದ್ಧದ ಕಣಗಳಾಗುವಂತೆ ಮಾಡಿದ್ದಾರೆ.

ಪಾಕೀಸ್ತಾನದ ಜನತೆಗೆ ಮತ್ತು ಕಾರ್ಮಿಕವರ್ಗಕ್ಕೆ ಸಿ.ಐ.ಟಿ.ಯು. ತನ್ನ ಭಾತೃಪೂರಿತ ಶುಭಾಶಯಗಳನ್ನು ಸಲ್ಲಿಸುತ್ತದೆ. ಪ್ರಜಾಪ್ರಭುತ್ವವನ್ನು ಪುನರ್‌ಸ್ಥಾಪಿಸಲು ಮತ್ತು ಪೂರ್ಣ ಟ್ರೇಡ್ ಯೂನಿಯನ್ ಹಕ್ಕುಗಳನ್ನು ಪಡೆಯಲು ಅವರು ನಡೆಸುತ್ತಿರುವ ಧೀರ ಹೋರಾಟಗಳನ್ನು ಭಾರತದ ಕಾರ್ಮಿಕವರ್ಗವು ಅತ್ಯಾಸಕ್ತಿಯಿಂದ ಗಮನಿಸುತ್ತಿದೆ. ಪಾಕ್‌ನ ಮಿಲಿಟರಿ ಆಳರಸರು ದಿನೇ ದಿನೇ ಜನತೆಯಿಂದ ದೂರವಾಗುತ್ತಿದ್ದು ಉಪಖಂಡದಲ್ಲಿ ಯುದ್ಧವನ್ನು ಪ್ರಾರಂಭಿಸಲು ಅಮೇರಿಕ ಸಂಯುಕ್ತ ಸಂಸ್ಥಾನಗಳ ಮಿಲಿಟರಿ ನೆರವನ್ನು ಹೆಚ್ಚುಹೆಚ್ಚಾಗಿ ಅಪೇಕ್ಷಿಸುತ್ತಿದ್ದಾರೆ. ಏಷ್ಯನ್‌ರು ಏಷ್ಯನ್‌ರ ವಿರುದ್ಧ ಹೋರಾಡಿ, ಕಚ್ಚಾಡುವಂತೆ ಮಾಡುವ ಸಾಮ್ರಾಜ್ಯಶಾಹೀ ಪ್ರಯತ್ನವನ್ನು ಭಾರತದ ಮತ್ತು ಪಾಕೀಸ್ತಾನದ ಕಾರ್ಮಿಕವರ್ಗವು ಜಂಟಿಯಾಗಿ ಸೋಲಿಸುತ್ತದೆ ಎಂಬ ದೃಢ ವಿಶ್ವಾಸ ಸಿ.ಐ.ಟಿ.ಯು.ವಿಗಿದೆ.

ದೇಶದ ಸಮಗ್ರತೆಗೆ ಅಪಾಯ :

ಈ ಮೇ ದಿನದಂದು, ಯುದ್ಧೋನ್ಮಾದಿಗಳ ತಂತ್ರದ ವಿರುದ್ಧ ಭಾರತದ ಕಾರ್ಮಿಕ ವರ್ಗವು ತನ್ನ ಶಕ್ತಿಯುತ ಧ್ವನಿ ಎತ್ತಬೇಕೆಂದು, ಶಾಂತಿಯ ರಕ್ಷಣೆಗಾಗಿ ಬಲವಾಗಿ ಹೋರಾಡಬೇಕೆಂದು ಸಿ.ಐ.ಟಿ.ಯು. ಕರೆಕೊಡುತ್ತದೆ.

ಈ ಮೇದಿನದಂದು ಸಾಮ್ರಾಜ್ಯಶಾಹಿಯ ಪಿತೂರಿಯಿಂದಾಗಿ ದೇಶದ ಸಮಗ್ರತೆಗೆ ಒದಗಿರುವ ಅಪಾಯವನ್ನು ಕಾರ್ಮಿಕವರ್ಗ ಮನಗಂಡು ದೇಶದ ಸಮಗ್ರತೆ, ದುಡಿಯುವ ವರ್ಗದ ಐಕ್ಯತೆಯ ರಕ್ಷಣೆಗಾಗಿ ತಮ್ಮ ದೃಢನಿರ್ಧಾರ ವ್ಯಕ್ತಪಡಿಸಬೇಕಾಗಿದೆ. ಅಸ್ಸಾಂನ ದೀರ್ಘಕಾಲದ ಚಳುವಳಿ, ತ್ರಿಪುರದ ದಂಗೆ ಮತ್ತು ಈಶಾನ್ಯ ಪ್ರದೇಶಗಳಲ್ಲಿ ಅಸ್ಥಿರತೆ ಮತ್ತಿತರ ಕಡೆ ಕಾಣಿಸಿಕೊಳ್ಳುತ್ತಿರುವ ಪ್ರಾದೇಶಿಕ ಸಂಕುಚಿತವಾದದ ಹಿಂದೆ ಸಾಮ್ರಾಜ್ಯಶಾಹಿ ಪಿತೂರಿ ಅಡಕವಾಗಿರುವುದು ಸ್ಪಷ್ಟವಾಗಿ ಕಂಡುಬರುತ್ತಿದೆ. ನಿರಾಶ್ರಿತರ ಸತತ ಆಗಮನವು ಎಲ್ಲರನ್ನು ವಿಮಂಚನೆಗೀಡುಮಾಡಿದೆ. ಚಳುವಳಿಯ ಸಂದರ್ಭದಲ್ಲಿ ಕೇಳಿಬಂದ ವಿಚ್ಛಿದ್ರಕಾರಿ ಘೋಷಣೆಗಳ ಸೃಷ್ಟಿಯಿಂದ ಈ ಗಂಭೀರತೆಯನ್ನು ಪರಿಶೀಲಿಸಬೇಕಾಗುತ್ತದೆ. ದೇಶದ ಐಕ್ಯತೆಗೋಸ್ಕರ ನಿರಂತರ ಶ್ರಮವಹಿಸಿ, ತಮ್ಮ ಮೇಲಾದ ದಾಳಿ-ದಬ್ಬಾಳಿಕೆಗಳನ್ನು ಎದುರಿಸಿ ಈಶಾನ್ಯ ಭಾಗದಲ್ಲಿ ದೇಶದ ಸಮಗ್ರತೆಗೋಸ್ಕರ ದೃಢವಾಗಿ ನಿಂತ ಕಾರ್ಮಿಕ ವರ್ಗಕ್ಕೆ ಮತ್ತು ಇತರ ಪ್ರಜಾಪ್ರಭುತ್ವ ಶಕ್ತಿಗಳಿಗೆ ಸಿ ಐ ಟಿ.ಯು. ಅಭಿನಂದಿಸುತ್ತದೆ. ಈ ಪ್ರದೇಶದ ಜನತೆಯ ಕ್ಲೇವು ನಿರ್ಧಿಷ್ಟ ಸಮಸ್ಯೆಗಳನ್ನು ಸಂಧಾನದ ಮೂಲಕ ಮಾತ್ರವೇ ಪರಿಹಾರಮಾಡಲು ಪ್ರಯತ್ನಿಸಬೇಕೇ ಹೊರತು ವಿವೇಚನೆಯಿಲ್ಲದ ಸರಕಾರಿ ಯಂತ್ರದ ಮರ್ಧನದಿಂದ ಸಾಧ್ಯವಿಲ್ಲವೆಂದು ಸಿ.ಐ.ಟಿ.ಯು. ಸ್ಪಷ್ಟಪಡಿಸುತ್ತದೆ.

ಆಳವಾಗುತ್ತಿರುವ ಆರ್ಥಿಕ ಬಿಕ್ಕಟ್ಟು :

ಆರ್ಥಿಕ ಸ್ಥಿತಿಯ ಸುಧಾರಣೆಗೆ ಉದ್ದುದ್ದ ವಾಗ್ದಾನಗಳನ್ನು ನೀಡುತ್ತಿದ್ದರೂ ಪರಿಸ್ಥಿತಿಯಲ್ಲಿ ಯಾವುದೇ ಬದಲಾವಣೆಯಿಲ್ಲ. "ಕಾರ್ಯತತ್ಪರ ಸರಕಾರ" ಮತ್ತು "ಬೆಲೆಏರಿಕೆ ತಡೆಯುತ್ತೇವೆ" ಎಂಬ ಘೋಷಣೆಗಳು ಸವಕಲಾಗಿವೆ. 1970-71 ವರ್ಷದ ಆಧಾರದ ಮೇಲೆ ತುಲನೆಮಾಡಿ ನೋಡಿದರೆ ಬೆಲೆಏರಿಕೆಯು ಗಗನಕ್ಕೇರುತ್ತಿದೆ. 1980 ಮಾರ್ಚ್ ತಿಂಗಳಲ್ಲಿ ಬೆಲೆಗಳ ಸೂಚ್ಯಂಕವು 230 ಇದ್ದುದ್ದು 1981 ಮಾರ್ಚ್‌ಗೆ 269·6 ಆಗಿದೆ.

ಆರನೇ ಪಂಚವಾರ್ಷಿಕ ಯೋಜನೆಯಲ್ಲಿ ಜನತೆಯ ಮೇಲೆ ಹೊಸ ಹೊಸ ಹೊರೆಗಳನ್ನು ಹೊರಿಸಲಾಗಿದೆ. ಇದರಿಂದಾಗಿ ಬೆಲೆಗಳನ್ನು ಹೆಚ್ಚಿಸಬೇಕೆಂದು ಸರಕಾರಿ ಉದ್ಯಮಗಳಿಗೆ ನಿರ್ದೇಶನ ನೀಡಲಾಗಿದೆ. ಇದು ಆದಾಯಗಳ ಶೇಖರಣೆಗೆ ಪೂರಕವಾಗಿದೆ ಎಂಬ ಹೆಸರಿನಲ್ಲಿ ಕೈಗೊಳ್ಳಲಾಗಿದೆ. ಇವೆಲ್ಲವೂ ಸರಕಾರದ ಸತತ ಖೋತಾ ಬಜೆಟ್‌ನ ಪರಿಣಾಮದಿಂದಾಗಿ ಉದ್ಭವಿಸಿರುವ ಸಮಸ್ಯೆಗಳು. ಈಗಾಗಲೇ ಎಲ್ಲಾ ಬೆಲೆಗಳು ಏರುತ್ತಿರುವದರ ಜೊತೆಗೆ ವಿದ್ಯುಚ್ಛಕ್ತಿಯ ದರ, ನೀರಾವರಿ ಶುಲ್ಕ ಮುಂತಾದವುಗಳು, ಹೆಚ್ಚುವ ಲಕ್ಷಣಗಳು ಸ್ಪಷ್ಟವಾಗಿ ಕಂಡುಬರುತ್ತಿವೆ. ನಿರುದ್ಯೋಗದ ಪ್ರಮಾಣವು 1980 ಡಿಸೆಂಬರ ಕೊನೆಯ ವೇಳೆಗೆ ಹೆಚ್ಚಾಗಿ 1 ಕೋಟಿ ಅರವತ್ತೆರಡು ಲಕ್ಷ ನಿರುದ್ಯೋಗಿಗಳು ಇದ್ದಾರೆಂದು ಸರ್ಕಾರದ ಅಂಕಿಅಂಶಗಳು ಸ್ಪಷ್ಟಪಡಿಸುತ್ತವೆ. ಇದರಲ್ಲಿ ಅರ್ಧಾಂಶ ಜನ ವಿದ್ಯಾವಂತ ನಿರುದ್ಯೋಗಿಗಳು, ಇಷ್ಟಿದ್ದರೂ ವಿಶ್ವಬ್ಯಾಂಕಿನ ಒತ್ತಡದ ಮೇರೆಗೆ ನಮ್ಮ ಸರ್ಕಾರವು ಯತ್ನಿಸುತ್ತಿರುವ ಕಂಪ್ಯೂಟರ್ ಮತ್ತು ಇತರ ಯಾಂತ್ರೀಕರಣದಿಂದಾಗಿ ಸಾವಿರಾರು ಜನ ಬೀದಿಪಾಲಾಗುವ ಪರಿಸ್ಥಿತಿ ಉಂಟಾಗಿದೆ. ಬೆಂಕಿ ಪೊಟ್ಟಣ ಮತ್ತು ತಂಬಾಕು ಕೈಗಾರಿಕೆಗಳಲ್ಲಿ ಹೆಂಗಸರು ಮತ್ತು ಮಕ್ಕಳು ಮೊದಲ ಬಲಿಪಶುಗಳಾಗಿದ್ದಾರೆ. ಉತ್ಪಾದನಾ ವೆಚ್ಚವನ್ನು ಕಡಿಮೆ ಮಾಡುವ ದೃಷ್ಟಿಯಿಂದ ಮತ್ತು ಆರ್ಥಿಕ ಮುಗ್ಗಟ್ಟನ್ನು ಕಾರ್ಮಿಕ ವರ್ಗದ ಮೇಲೆ ವರ್ಗಾಯಿಸುವವಕ್ಕಾಗಿ ಯಾಂತ್ರೀಕರಣ ಮತ್ತು ಸ್ವಯಂಚಾಲಿತ ಯಂತ್ರಗಳ ಬಳಕೆಯ ತೀವ್ರತೆ ಹೆಚ್ಚಾಗುತ್ತಿದೆ. ನಿರುದ್ಯೋಗ, ಬೆಲೆ ಏರಿಕೆ ಮುಂತಾದ ಸಂಕಷ್ಟಗಳು ಒಂದೆಡೆ ಕಂಡು ಬರುತ್ತಿವೆ. ಇನ್ನೊಂದೆಡೆ ಗುತ್ತೇದಾರಿ ಬಂಡವಾಳಶಾಹಿಗಳ ಮತ್ತು ಬಹುರಾಷ್ಟ್ರೀಯ ಸಂಸ್ಥೆಗಳ ಬಂಡವಾಳ ಒಂದೇ ಸಮನೆ ಹೆಚ್ಚುತ್ತಿರುವದು ಕಂಡುಬರುತ್ತಿದೆ. ಈ ಬೆಳವಣಿಗೆಗಳ ಕಡೆ ಕಾರ್ಮಿಕ ವರ್ಗ ವಿಶೇಷಗಮನ ಗಮನ ಹರಿಸಬೇಕೆಂದು ಸಿ.ಐ.ಟಿ.ಯು. ಕರೆ ನೀಡುತ್ತದೆ. ನಮ್ಮ ದೇಶದ 20 ಗುತ್ತೇದಾರಿ ಕುಟುಂಬಗಳು ತಮ್ಮ ಬಂಡವಾಳದ ಏರಿಕೆಯ ಮೊತ್ತವನ್ನು 1972 ರಿಂದ 78ರ ಮಧ್ಯೆ ನೂರಕ್ಕೆ ನೂರರಷ್ಟು ಹೆಚ್ಚಿಸಿಕೊಂಡಿವೆ. ಗುತ್ತೇದಾರಿ ಬಂಡವಾಳಶಾಹಿ ಪಕ್ಷಪಾತದಿಂದಾಗಿ ಸರಕಾರ ಸಂಪನ್ಮೂಲಗಳನ್ನು ಅಧಿಕಗೊಳಿಸುವ

ಮೇ ದಿನದ ಹಾಡು

ವಿಶ್ವಕ್ರಾಂತಿ ಬಾವುಟ ದಾಸ್ಯ ಹರಿದ ಬಾವುಟ
ರಕ್ತಕ್ರಾಂತಿಯಿಂದ ಹುಟ್ಟಿಬಂದ ಕೆಂಪುಬಾವುಟ

ಕೂಲಿಕಾರ ರಕ್ತದಿಂದ ಹುಟ್ಟಿಬಂದ ಬಾವುಟ
ಕೂಲಿಕಾರರನ್ನು ಜಾಗೃತಗೊಳಿಸಿ ನಿಂತ ಬಾವುಟ.

ಕಾರ್ಲ್ ಮಾರ್ಕ್ಸ್ ತತ್ವವನ್ನು ಅಪ್ಪಿಕೊಂಡ ಬಾವುಟ
ಲೆನಿನ್ ಮಾವೋರಂಥ ಕ್ರಾಂತಿ ಪುರುಷರಿಡಿದ ಬಾವುಟ

ಸುಲಿಗೆ ತಡೆಯಲಿಕ್ಕೆ ಸಮರ ಹೂಡಿದಂತ ಬಾವುಟ
ಸಮಂತವಾದ ವಿಜಯಕ್ಕಾಗಿ ಕರೆಕೊಟ್ಟ ಬಾವುಟ

ವಿಶ್ವದ ಕಾರ್ಮಿಕರನ್ನು ಒಂದುಗೂಡಿಸಿದ ಬಾವುಟ
ಜನಕೆ ಕ್ರಾಂತಿ ಕರೆಯನಿತ್ತ ಮೇ ದಿನದ ಬಾವುಟ

ಅಮೇರಿಕಾದಲ್ಲಿ ಮೊದಲು ಹುಟ್ಟಿಬಂದ ಬಾವುಟ
ಸೋವಿಯೆಂತ್ ರಷ್ಯಾ ಚೈನದೊಳಗೆ ಅಚಲವಾದ ಬಾವುಟ.

ಜಿಂದಾಬಾದ್...ಜಿಂದಾಬಾದ್...ಇಂಕ್ವಿಲಾಬ್...ಜಿಂದಾಬಾದ್
ಇಂಕ್ವಿಲಾಬ್...ಇಂಕ್ವಿಲಾಬ್...ಇಂಕ್ವಿಲಾಬ್...ಜಿಂದಾಬಾದ್
ಇಂಕ್ವಿಲಾಬ್ ಜಿಂದಾಬಾದ್.

ಉದ್ದೇಶದಿಂದ ಯೋಜನಾ ಕರ್ತರು ಆದಾಯ ತೆರಿಗೆ ಮುಂತಾದ ತೆರಿಗೆಗಳನ್ನು ಕೆಲವು ಮಟ್ಟಿಗೆ ಮಿತಿಗೊಳಿಸಿದ್ದಾರೆ. ತೆರಿಗೆಗಳ್ಳತನವನ್ನು ತಡೆಯುವದರ ಬದಲು, ಕಾಳಸಂತೆಖೋರರಿಗೆ, ಲಾಭಬಡುಕರಿಗೆ ರಕ್ಷಣೆ ಕೊಡುವ ಉದ್ದೇಶದಿಂದ "ವಿಶೇಷ ಬೇರರ್‌ಬಾಂಡ್" ಯೋಜನೆಯನ್ನು ಹುಟ್ಟು ಹಾಕಲಾಗಿದೆ. ಇದಕ್ಕಿಂತಲೂ ಅಪಾಯಕಾರಿ ಸೂಚನೆಯೆಂದರೆ ಆರನೇ ಪಂಚವಾರ್ಷಿಕ ಯೋಜನೆಯು ಸುಮಾರು ಹತ್ತು ಸಾವಿರ ಕೋಟಿ ರೂ.ಗಳ ವಿದೇಶಿ ಸಾಲಗಳ ಮೇಲೆ ಆಧಾರ ಪಟ್ಟಿರುವದು. ಇದಕ್ಕೊಸ್ಕರ ನಮ್ಮ ಸರಕಾರವು ವಿದೇಶಿ ಬಹುರಾಷ್ಟ್ರೀಯ ಸಂಸ್ಥೆಗಳನ್ನು ದೇಶದ ಆರ್ಥಿಕ ವ್ಯವಸ್ಥೆಯ ಮೇಲೆ ಈಗಾಗಲೇ ಅವರ ಹಿಡಿತವು ಬಲವಾಗಿದೆಯೆಂದು ಗೊತ್ತಿದ್ದೂ ಆಹ್ವಾನಿಸುತ್ತಿದೆ. ಬಹುರಾಷ್ಟ್ರೀಯ ಕಂಪನಿಗಳು ಅದರಲ್ಲೂ ವಿಶೇಷವಾಗಿ ಔಷಧಿ ತಯಾರಿಸುವ ಕಂಪನಿಗಳು ನಮ್ಮ ದೇಶದ ಎಲ್ಲ ಕಾನೂನುಗಳನ್ನು ಉಲ್ಲಂಘನೆ ಮಾಡಿ, ದೇಶವನ್ನು ಮತ್ತು ಜನತೆಯನ್ನು ಶೋಷಣೆ ಮಾಡುತ್ತವೆ. ನಮ್ಮ ಸಂಪನ್ಮೂಲಗಳನ್ನು ಕೊಳ್ಳೆ ಹೊಡೆಯುತ್ತಿದ್ದಾರೆ. ಪರಿಶೋಧನೆಗಳನ್ನು ಮೊಟಕುಗೊಳಿಸುತ್ತಿದ್ದಾರೆ. ಸ್ವಾಯತ್ತತೆಯನ್ನು ಕಸಿಯುತ್ತಿದ್ದಾರೆ. ಕಾರ್ಖಾನೆಗಳನ್ನು ಮುಚ್ಚುವದರ ಮೂಲಕ ಕಾರ್ಮಿಕರನ್ನು ಹೊರಗಟ್ಟಿ ಕಾರ್ಮಿಕ ಚಳುವಳಿಯನ್ನು ದಮನಗೊಳಿಸಲೆತ್ನಿಸುತ್ತಿದ್ದಾರೆ.

ಸರ್ಕಾರ ತನ್ನ ವಿಪತ್ಕಾರಿ ಆರ್ಥಿಕ ನೀತಿಯನ್ನು ಬದಲಾಯಿಸಿಕೊಳ್ಳುವಂತೆ ಒತ್ತಾಯಿಸಲು ಬಲಿಷ್ಠ ಹೋರಾಟಗಳನ್ನು ಕೈಗೊಳ್ಳಬೇಕಾಗಿದೆ. ಬಹುರಾಷ್ಟ್ರೀಯ ಬಂಡವಾಳಶಾಹಿಗಳ ಸಹಿತ ಗುತ್ತೇದಾರಿ ಬಂಡವಾಳಶಾಹೀ ಕಂಪನಿಗಳನ್ನು ರಾಷ್ಟ್ರೀಕರಣಗೊಳಿಸುವ ಬೇಡಿಕೆ ಮುಂದಿಡಬೇಕಾಗಿದೆ. ಏಕೆಂದರೆ ನಮ್ಮ ಅರ್ಥ ವ್ಯವಸ್ಥೆಯ ಮೇಲಿನ ಅವರ ಹಿಡಿತ ನಮ್ಮ ವಿಕಾಸದ ಹಾದಿಯಲ್ಲಿ ಅಡ್ಡಗೋಡೆಯಾಗಿದೆ. ಅಲ್ಲದೆ ದೇಶದ ಸ್ವಾತಂತ್ರ್ಯಕ್ಕೂ ಗಂಡಾಂತರ ಒದಗುವ ಪರಿಸ್ಥಿತಿ ಉಂಟಾಗಿದೆ. ಈ ಮೇ ದಿನದಂದು ಈ ಗಂಡಾಂತರಗಳ ವಿರುದ್ಧ ಜಾಗೃತರಿರಬೇಕೆಂದು ಸಿ.ಐ.ಟಿ.ಯು. ಕಾರ್ಮಿಕವರ್ಗವನ್ನು ಎಚ್ಚರಿಸುತ್ತದೆ.

ಬಂಡವಾಳಶಾಹಿಗಳ ಲಾಭವನ್ನು ಹೆಚ್ಚಿಸುವ, ಪಟ್ಟಣಗಳಲ್ಲಿನ ಜೀವನಮಟ್ಟವನ್ನು ನಿಯಂತ್ರಿಸುವ ಏಕೈಕ ಉದ್ದೇಶದಿಂದ ಮೂರು ದಶಕಗಳಿಂದಲೂ ದೇಶದ ರೈತಾಪಿವರ್ಗವನ್ನು ನಿರ್ಲಕ್ಷಿಸಿಕೊಂಡು ಬರಲಾಗುತ್ತಿದೆ. ಈ ಸತ್ಯಾಂಶವನ್ನು ಅರಿಯಬೇಕೆಂದು ಕಾರ್ಮಿಕವರ್ಗವನ್ನು ಸಿ.ಐ.ಟಿ.ಯು. ಗಮನಸೆಳೆಯುತ್ತದೆ. ಇಂದು ರೈತವರ್ಗವು ತಾವು ಬೆಳೆದ ಬೆಳೆಗಳಿಗೆ ಯೋಗ್ಯಬೆಲೆ ನಿಗದಿಮಾಡಬೇಕೆಂದು, ಎಲ್ಲ ದಮನಕಾರೀ ಕ್ರಮಗಳನ್ನೆದುರಿಸಿ ತೀವ್ರ ಹೋರಾಟ ಕೈಗೊಂಡಿದೆ. ಈ ಹೋರಾಟದಲ್ಲಿ ಕಾರ್ಮಿಕರು ಸಕ್ರಿಯ ಪಾತ್ರವಹಿಸುವುದರ ಜೊತೆಗೆ ರೈತ-ಕಾರ್ಮಿಕ ಸಖ್ಯತೆಯನ್ನು ಬೆಳೆಸಲು ಕಾರ್ಯತತ್ಪರರಾಗಬೇಕೆಂದು ಕರೆಕೊಡುತ್ತದೆ.

ಬೆಳೆಯುತ್ತಿರುವ ಪ್ರತಿರೋಧ :

ಕಾರ್ಮಿಕರ ವೇತನದ ಮೇಲೆ ಪ್ರಾರಂಭವಾಗಲಿರುವ ಹೊಸ ಆಕ್ರಮಣಗಳ ಬಗ್ಗೆ ಸಿ.ಐ.ಟಿ.ಯು. ಈ ಮೇ ದಿನದಂದು ಕಾರ್ಮಿಕ ವರ್ಗದ ಗಮನವನ್ನು ಸೆಳೆಯುತ್ತದೆ. ತಡೆಹಿಡಿದ ವೇತನವೆಂಬ ಬೋನಸ್ ಪರಿಕಲ್ಪನೆಯ ಮೇಲೆ ಮೊದಲನೆಯ ಆಕ್ರಮಣವಾಗಿದೆ. ರೈಲ್ವೆ ಫೆಡರೇಷನ್‌ಗಳು ಉತ್ಪಾದಕತೆಗೆ ಜೋಡಿಸಿದಂತೆ ಬೋನಸ್ ಪಡೆಯಲು ಒಪ್ಪಿದ್ದು, ಈ ಮೂಲಕ ಕಾರ್ಮಿಕ ವರ್ಗವು ತನ್ನ ಅನೇಕ ವರ್ಷಗಳ ಹೋರಾಟದ ಫಲವಾಗಿ ಪಡೆದಿರುವ ಅನುಕೂಲಕರ ಸ್ಥಾನದ ಮೇಲೆ ಧಾಳಿ ಪ್ರಾರಂಭಿಸಲಾಗಿದೆ. ಬೋನಸ್ ಪಡೆಯಲು ಅಭಾಧಿತರಾಗಿರುವವರ ಮೇಲೆ ಆದಾಯ ಮಿತಿಯನ್ನು ಹೇರುವ ಪ್ರಯತ್ನ ಈ ಧಾಳಿಯ ಎರಡನೆಯ ಭಾಗವಾಗಿದೆ. ಏಕಪಕ್ಷೀಯವಾಗಿ ತುಟ್ಟಿಭತ್ಯೆಯ ತಟಸ್ಥಗೊಳಿಸುವುದು ಮತ್ತು ಒಂದು ನಿರ್ಧಿಷ್ಟ ಮಟ್ಟದ ಮೇಲೆ ವೇತನ ಪಡೆಯುವವರಿಗೆ ತುಟ್ಟಿಭತ್ಯೆಯನ್ನ ನಿರಾಕರಿಸುವುದು ಈ ಧಾಳಿಯ ಮೂರನೆಯ ಭಾಗವಾಗಿದೆ. ಕೊನೆಯದಾಗಿ ಯಾವುದೇ ರೀತಿಯ ವೇತನ ಏರಿಕೆಗೆ ಸಾಮಾನ್ಯ ವಿರೋಧವಿದೆ. ಈ ಗುರಿಯನ್ನು ಸಾಧಿಸಲು ಸರ್ಕಾರವು ಸಾಮೂಹಿಕ ಚೌಕಾಶಿಯ ಹಕ್ಕಿನ ಬುಡವನ್ನೇ ಕತ್ತರಿಸಿ ಹಿಂದಿನ ಒಪ್ಪಂದಗಳನ್ನು ಮುರಿಯುತ್ತಿದೆ. ಜೀವವಿಮಾ ನಿಗಮದ ನೌಕರರಿಗೆ ಸಂಬಂಧಿಸಿದಂತೆ ಸುಪ್ರೀಂಕೋರ್ಟಿನ ತೀರ್ಪನ್ನು ಗೌರವಿಸಲು ಸರ್ಕಾರವು ನಿರಾಕರಿಸಿದ್ದು, ನೌಕರರ ಸೇವಾ ನಿಯಮಗಳು, ವೇತನ, ಬೋನಸ್ ಇತ್ಯಾದಿಗಳಿಗೆ ಸಂಬಂಧಿಸಿದಂತೆ ಒಂದು ಕಾಯಿದೆಯನ್ನು ತಂದಿದ್ದು ಈ ಮೂಲಕ ನಿರಂಕುಶ ಅಧಿಕಾರಗಳನ್ನು ಪಡೆದುಕೊಂಡಿದೆ. ಸಾಮಾನ್ಯ ವಿಮಾ ನಿಗಮದ ನೌಕರರ ಕುರಿತ ಕಥೆಯೂ ಇದೇ ಆಗಿದೆ.

ಸಾರ್ವಜನಿಕ ಕ್ಷೇತ್ರದ ನೌಕರರು ಮುಂಚಿನ ಒಪ್ಪಂದವನ್ನು ಜಾರಿ ಮಾಡುವಂತೆ ಒತ್ತಾಯಿಸಿ ನಡೆಸಿದ 77 ದಿನಗಳ ದೀರ್ಘ ಹೋರಾಟ ಮತ್ತು ದೇಶದಾದ್ಯಂತ 1981 ಮಾರ್ಚ್ 11ರಂದು ನಡೆಸಿದ ಸೌಹಾರ್ದಯುತ ಮುಷ್ಕರವನ್ನು ಸಿ.ಐ.ಟಿ.ಯು. ಅಭಿನಂದಿಸುತ್ತದೆ. ವೇತನ ಮತ್ತು ಹತ್ತು ಗಂಟೆಗಳ ಕೆಲಸಕ್ಕೆ ಸಂಬಂಧಿಸಿದ ಒಪ್ಪಂದಗಳಿಗೆ ಬೆನ್ನು ತೋರಿಸುವ ಧೋರಣೆಯ ವಿರುದ್ಧ ಹೋರಾಡುತ್ತಿರುವ ಲೋಕೋಮನ್‌ಗಳ ಮೇಲಿನ ದಬ್ಬಾಳಿಕೆ ಮತ್ತು ಅವರ ಮಹಿಳೆಯರ ಮೇಲಿನ ಗೂಂಡಾ ಧಾಳಿಗಳಿಂದ ಸರ್ಕಾರದ ಕಿರಾತಧೋರಣೆ ಬಯಲಾಗಿದೆ. ಜೀವವಿಮಾ ನೌಕರರು ತಮ್ಮ ವೇತನ, ಬೋನಸ್ ಮತ್ತು ಸಾಮೂಹಿಕ ಚೌಕಾಶಿಯ ಹಕ್ಕನ್ನು ರಕ್ಷಿಸಿಕೊಳ್ಳಲು ತೀವ್ರ ಹೋರಾಟದಲ್ಲಿ ತೊಡಗಿದ್ದಾರೆ. ಅವರು ತಮಗಾಗಿ ಮಾತ್ರ ಹೋರಾಡುತ್ತಿಲ್ಲ. ಬದಲಾಗಿ ಇಡೀ ಕಾರ್ಮಿಕ ವರ್ಗದ ಟ್ರೇಡ್‌ಯೂನಿಯನ್ ಹಕ್ಕುಗಳಿಗಾಗಿ ಹೋರಾಡುತ್ತಿದ್ದಾರೆ. ಜೀವನಾವಶ್ಯಕ ವೇತನವನ್ನು ಕನಿಷ್ಟ ವೇತನವನ್ನಾಗಿ ಪಡೆಯುವ ತನಕ ತಮ್ಮ ವೇತನ, ತಡೆಹಿಡಿದ ವೇತನವಾದ ಬೋನಸ್ ಇತ್ಯಾದಿಗಳ ರಕ್ಷಣೆಗಾಗಿ ಹೋರಾಡುವಂತೆ ಸಿ.ಐ.ಟಿ.ಯು. ಕಾರ್ಮಿಕ ವರ್ಗಕ್ಕೆ ಕರೆ ನೀಡುತ್ತದೆ.

ಭೀಕರ ದಬ್ಬಾಳಿಕೆ :

ಏರುತ್ತಿರುವ ಹೋರಾಟಗಳ ಪ್ರವಾಹವನ್ನು ತಡೆಗಟ್ಟಲು ಸರ್ಕಾರವು ಹೋರಾಟಗಳ ಮೇಲೆ-ಭೀಕರ ದಬ್ಬಾಳಿಕೆ ಪ್ರಾರಂಭಿಸಿದೆ. ತುರ್ತು ಪರಿಸ್ಥಿತಿಯ ಆಂತರಿಕ ಭದ್ರತಾ ಕಾಯಿದೆಯ ಹೊಸ ರೂಪವಾದ ರಾಷ್ಟ್ರೀಯ ಬದ್ರತಾ ಕಾಯ್ದೆಯು ಈಗ ಕಾಯಿದೆ ಪುಸ್ತಕದಲ್ಲಿ ಸೇರಿದೆ. ಈ ಕಾನೂನು ಬಾಹಿರ ಕಾನೂನಿನನ್ವಯ ಮುಷ್ಕರನಿರತ ಲೋಕೋಮನ್‌ಗಳನ್ನು ಬಂಧಿಸಿದ್ದು ಈ ಕಾಯಿದೆಯನ್ನು ಟ್ರೇಡ್ ಯೂನಿಯನ್ ಮತ್ತು ಪ್ರಜಾಪ್ರಭುತ್ವ ಚಳುವಳಿಯ ವಿರುದ್ಧ ಉಪಯೋಗಿಸುವುದಿಲ್ಲವೆಂಬ ಅಧಿಕೃತ "ಘೋಷಣೆಯ ಪೊಳ್ಳುತನವನ್ನು ಬಲುಯಮಾಡಿದೆ. ದಾಳಿ ವಿಧಾನಗಳ ಮೂಲಕ ಕಾರ್ಮಿಕರನ್ನು ಬೆದರಿಸಿ ಐ.ಎನ್.ಟಿ.ಯು.ಸಿ. ಸಂಘಗಳೊಡನೆ ಒಪ್ಪಂದಗಳನ್ನು ಮಾಡಲಾಗುತ್ತಿದೆ. ಕಾರ್ಮಿಕರ ಮೇಲೆ ಅಮಾನುಷ ಹಲ್ಲೆಗಳನ್ನು ನಡೆಸುವುದು, ಬಂಧಿಸುವುದು, ಗುಂಡಿಕ್ಕಿ ಕೊಲ್ಲುವುದು ಮತ್ತು ಅವರ ಮಹಿಳೆಯರ ಮಾನಭಂಗ ಇತ್ಯಾದಿಗಳು ದಿನನಿತ್ಯದ ಘಟನೆಗಳಾಗಿ ಹೋಗಿವೆ.

ಇದರೊಂದಿಗೆ ಕಾರ್ಮಿಕವರ್ಗದ ಐಕ್ಯತೆಯನ್ನು ಮುರಿಯಲು ನಾನಾ ವಿಧಾನಗಳನ್ನು ಅನುಸರಿಸಲಾಗುತ್ತಿದೆ. ಸಾರ್ವಜನಿಕ ಕ್ಷೇತ್ರದ ನೌಕರರ ಹೋರಾಟದ ಸಂದರ್ಭದಲ್ಲಿ ತಮಿಳು ಮತ್ತು ಮಲೆಯಾಳಿ ಕಾರ್ಮಿಕರ ವಿರುದ್ಧ ಭಿತ್ತಿಪತ್ರಗಳನ್ನು ಹೊರಡಿಸಿದ್ದು ಕಾರ್ಮಿಕರನ್ನು ಭೀತಿಗೊಳಿಸುವ ಮತ್ತು ಅವರ ಐಕ್ಯತೆಯನ್ನು ಮುರಿಯುವ ಇತ್ತೀಚಿಗಿನ ಹೊಸ ವಿಧಾನವಾಗಿದೆ. ಮತೀಯ ಗಲಭೆಗಳನ್ನು ಪ್ರಚೋದಿಸಲಾಗುತ್ತಿದ್ದು ಈ ಗಲಭೆಗಳಲ್ಲಿ ಮುಸ್ಲಿಂ ಅಲ್ಪಸಂಖ್ಯಾತರು ಅತ್ಯಂತ ಹೆಚ್ಚಿನ ನಷ್ಟಕ್ಕೊಳಗಾಗಿದ್ದಾರೆ. ಇದೇ ರೀತಿಯಲ್ಲಿ ಹರಿಜನ-ಗಿರಿಜನರ ವಿರುದ್ಧ ಜಾತೀಯ ಭಾವನೆಗಳನ್ನು ಕೆರಳಿಸಲಾಗುತ್ತಿದ್ದು ಈ ಮೂಲಕ ಶೋಷಿತವರ್ಗದ ಐಕ್ಯಚಳುವಳಿಯ ಮುನ್ನಡೆಯನ್ನು ತಡೆಯುವ ಹೇಯ ಪ್ರಯತ್ನಗಳನ್ನು ಮಾಡಲಾಗುತ್ತಿದೆ. ಕೆಲವು ವಿರೋಧ ಪಕ್ಷಗಳು ಮತ್ತು ಅವುಗಳ ಸಾಮೂಹಿಕ ಸಂಘಟನೆಗಳು ತಮ್ಮ ಸ್ವಾರ್ಥ ಹಿತಾಸಕ್ತಿಗಳಿಗಾಗಿ ಈ ಛಿದ್ರಕಾರಿ ವಿಧಾನಗಳನ್ನು ಬೆಂಬಲಿಸುತ್ತಿರುವುದು ದುರದೃಷ್ಟಕರವಾಗಿದೆ. ಇದರಿಂದಾಗಿ ಬಡವರನ್ನು ಮತ್ತಷ್ಟು ದರಿದ್ರರನ್ನಾಗಿಸುವ ಮತ್ತು ಶ್ರೀಮಂತರನ್ನು ಮತ್ತಷ್ಟು ಕುಬೇರರನ್ನಾಗಿಸುವ ಸರಕಾರದ ಧೋರಣೆಯ ವಿರುದ್ಧ ಶಕ್ತಿಯುತ ಮತ್ತು ಐಕ್ಯಚಳುವಳಿಯನ್ನು ಬೆಳೆಸುವಲ್ಲಿ ಅಡ್ಡಿಯುಂಟಾಗಿದೆ. ಸಮಾಜದ ಅತ್ಯಂತ ಕೆಳಮಟ್ಟದ ಶೇ. 50ರಷ್ಟು ಮಂದಿ 1968ರಲ್ಲಿ ರಾಷ್ಟ್ರೀಯ ಸಂಪತ್ತಿನಲ್ಲಿ ಪಡೆದಿದ್ದ ಶೇ. 19ರಷ್ಟು ಪಾಲು 1975-76ರಲ್ಲಿ ಶೇ. 7 ರಷ್ಟಕ್ಕಿಳಿದಿರುವುದು ಸರ್ಕಾರದ ಧೋರಣೆಯನ್ನು ಬಯಲಿಗೆಳೆಯುವ ಅಂಶವಾಗಿದೆ.

ಐಕ್ಯತೆ ಇಂದಿನ ಅವಶ್ಯಕತೆ

ದಬ್ಬಾಳಿಕೆ ಮತ್ತು ಛಿದ್ರಕಾರಿ ಕ್ರಮಗಳನ್ನು ಎದುರಿಸಿಯೂ ಜನತೆಯ ಪ್ರತಿರೋಧ ಬೆಳೆಯುತ್ತಿದೆ. ಮುಂಬರಲಿರುವ ಬೃಹತ್ ಹೋರಾಟಗಳ ತಯಾರಾಗಲು ಮತ್ತು ಈ ಹೋರಾಟಗಳ ಸಂದರ್ಭದಲ್ಲಿ ಸರ್ವಾಧಿಕಾರ ಶಕ್ತಿಗಳ ಎಲ್ಲ ರೀತಿಯ ದಬ್ಬಾಳಿಕೆಗಳನ್ನು ಎದುರಿಸಲು ಸಿದ್ಧರಾಗುವಂತೆ ಕಾರ್ಮಿಕವರ್ಗಕ್ಕೆ ಸಿ.ಐ.ಟಿ.ಯು. ಕರೆನೀಡುತ್ತದೆ. ಈಗಾಗಲೇ ಸರ್ಕಾರದ ಧೋರಣೆಗಳ ಬದಲಾವಣೆಗಾಗಿ ಒತ್ತಾಯಿಸಿ ಹೊಸಹೊಸ ವಿಭಾಗಗಳು ಹೋರಾಟ ಕಣಕ್ಕಿಳಿದಿವೆ. ಒಂದು ಹೊಸ ರೀತಿಯ ಐಕ್ಯ ಭಾವನೆ ಹೊರಹೊಮ್ಮಿದೆ. ಸರ್ಕಾರದ ಕಾರ್ಮಿಕ ವಿರೋಧಿನೀತಿ ಮತ್ತು ಬೆಲೆಏರಿಕೆಯ ವಿರುದ್ಧ ರಾಷ್ಟ್ರೀಯ ಸಮಾವೇಶವೊಂದನ್ನು ನಡೆಸಲು ಅನೇಕ ಕಾರ್ಮಿಕಸಂಘಗಳ ಕೇಂದ್ರಗಳು ಮತ್ತು ರಾಷ್ಟ್ರೀಯ ಫೆಡರೇಷನ್‌ಗಳು ಒಟ್ಟಿಗೆ ಸೇರಿರುವುದನ್ನು ಸಿ.ಐ.ಟಿ.ಯು. ಅಭಿನಂದಿಸುತ್ತದೆ. ಸಿ.ಐ.ಟಿ.ಯು. ಈ ಕ್ರಮವನ್ನು ಸ್ವಾಗತಿಸುವುದರೊಂದಿಗೆ ಜೀವನಮಟ್ಟ, ಟ್ರೇಡ್ ಯೂನಿಯನ್ ಹಕ್ಕುಗಳು ಮತ್ತು ಎಲ್ಲಕ್ಕಿಂತ ಮುಖ್ಯವಾಗಿ ಪ್ರಜಾಪ್ರಭುತ್ವದ ರಕ್ಷಣೆಗಾಗಿ ಸತತ ವಿಮರ್ಶೆ ಮತ್ತು ಪರಸ್ಪರ ಒಪ್ಪಿಕೊಂಡ ತೀರ್ಮಾನಗಳ ಆಧಾರದ ಮೇಲೆ ಕಾರ್ಯಾಚರಣೆ ನಡೆಸಲು ಕಾರ್ಮಿಕರ ಮತ್ತು ನೌಕರರ ಎಲ್ಲ ಕೇಂದ್ರ ಸಂಘಟನೆಗಳ ಒಕ್ಕೂಟವೊಂದನ್ನು ರಚಿಸಬೇಕೆಂಬ ಕರೆಯನ್ನು ಮತ್ತೊಮ್ಮೆ ಕಳಕಳಿಯಿಂದ ಮುಂಡಿಸುತ್ತದೆ. ಜನತೆಯ ಮೇಲೆ ಸರ್ವಾಧಿಕಾರಿ ಆಳ್ವಿಕೆಯನ್ನು ಹೇರುವ ಕುತಂತ್ರವನ್ನು ಸೋಲಿಸಲು ತಕ್ಷಣದ ಅಗತ್ಯವಾಗಿರುವ ಕಾರ್ಮಿಕವರ್ಗದ ಐಕ್ಯತೆಯನ್ನು ಸಾಧಿಸುವ ತನ್ನ ಕರ್ತವ್ಯವನ್ನು ಮುಂದೆ ಕೊಂಡೊಯ್ಯಲು ಈ ಮೇ ದಿನದಂದು ಸಿ.ಐ.ಟಿ.ಯು. ಪ್ರತಿಜ್ಞೆ ಕೈಗೊಳುತ್ತಿದೆ.

ಎಡಪಕ್ಷಗಳ ನೇತೃತ್ವದ ಸರ್ಕಾರಗಳನ್ನು ರಕ್ಷಿಸಿ

ಅಧ್ಯಕ್ಷೀಯ ಮಾದರಿ ಸರ್ಕಾರ ಮತ್ತು ಬದ್ಧ ನ್ಯಾಯಾಂಗದ ಮಾತುಗಳು ಪಾರ್ಲಿಮೆಂಟರಿ ಪ್ರಜಾಪ್ರಭುತ್ವವನ್ನು ನಾಶಗೊಳಿಸಿ ಮತ್ತು ಜನತೆಯ ನಾಗರಿಕ ಸ್ವಾತಂತ್ರ್ಯವನ್ನು ದೋಚಿ ಸರ್ವಾಧಿಕಾರಿ ಆಳ್ವಿಕೆಯನ್ನು ಮತ್ತೊಮ್ಮೆ ಹೇರುವ ಪಿತೂರಿಯನ್ನು ಸ್ಪಷ್ಟಗೊಳಿಸಿವೆ. ಟ್ರೇಡ್ ಯೂನಿಯನ್ ಮತ್ತು ಪ್ರಜಾಪ್ರಭುತ್ವ ಚಳುವಳಿಯ ವಿರುದ್ಧ ದಮನಕಾರಿ ಸರ್ಕಾರಿ ಯಂತ್ರವನ್ನು ಮತ್ತು ರಾಷ್ಟ್ರೀಯ ಭದ್ರತಾ ಕಾಯಿದೆಯನ್ನು ಉಪಯೋಗಿಸಲು ನಿರಾಕರಿಸಿರುವ ಎಡಪಕ್ಷಗಳ ನೇತೃತ್ವದ ಸರ್ಕಾರಗಳು ಪ್ರಜಾಪ್ರಭುತ್ವ ಹಕ್ಕುಗಳ ರಕ್ಷಣಾಕೋಟೆಗಳಾಗಿ ನಿಂತಿವೆ. ಈ ಸರ್ಕಾರಗಳು ತುಳಿತಕ್ಕೊಳಗಾದ ಜನತೆಯ ಹಿತವನ್ನು ಸತತವಾಗಿ ಎತ್ತಿ ಹಿಡಿದು ರಾಜ್ಯ ಸರ್ಕಾರಗಳ ಪರಿಮಿತಿಯೊಳಗೇ ಜನತೆಗೆ ಪರಿಹಾರಗಳನ್ನು ನೀಡುತ್ತಿರುವುದಲ್ಲದೆ ನಾಗರೀಕ ಸ್ವಾತಂತ್ರ್ಯ ಮತ್ತು

(7ನೇ ಪುಟ ನೋಡಿ)

ಯಶಸ್ವೀ ಸಮಾವೇಶ

26-4-81 ರಂದು ಸಿ. ಐ. ಟಿ. ಯು., ಎ.ಐ.ಟಿ.ಯು.ಸಿ. ಮತ್ತು ಎಚ್.ಎಂ.ಎಸ್.ಗಳ ಜಂಟೀ ನೇತೃತ್ವದಲ್ಲಿ ಬೆಂಗಳೂರಿನಲ್ಲಿ ಕನಿಷ್ಠ ಕೂಲಿಗೆ ಸಂಬಂಧಿಸಿದ ಸಮಾವೇಶ ಏರ್ಪಡಿಸಲಾಗಿತ್ತು. ಸಮಾವೇಶ ಅತ್ಯಂತ ಯಶಸ್ವಿಯಾಗಿದ್ದು ರಾಜ್ಯದ ಎಲ್ಲಕಡೆಗಳಿಂದ ಕೃಷಿ, ಪ್ಲಾಂಟೇಷನ್ಸ್, ಹೋಟೆಲ್, ಅಂಗಡಿ, ಬೀಡಿ, ಇಂಜನಿಯರಿಂಗ್ ಮುಂತಾದ ಕೈಗಾರಿಕಾ ಕಾರ್ಮಿಕರ ಸುಮಾರು 300 ಪ್ರತಿನಿಧಿಗಳು ಸಮಾವೇಶಕ್ಕೆ ಆಗಮಿಸಿದ್ದರು. ಕಾಂ. ಟಿ. ಎಸ್. ಅನಂತರಾಂ (ಸಿ.ಐ.ಟಿ.ಯು.), ಸಿ. ಮುನಿರತ್ನಂ (ಎ.ಐ.ಟಿ.ಯು.ಸಿ.), ಎಂ.ವಿ. ಚಂದ್ರಶೇಖರ (ಎಚ್.ಎಂ.ಎಸ್.) ಇವರುಗಳು ಅಧ್ಯಕ್ಷ ಮಂಡಲಿಯಲ್ಲಿದ್ದರು. ಸಂಘಟಿತ ಕಾರ್ಮಿಕರ ಪ್ರತಿನಿಧಿಗಳೂ ಸಮಾವೇಶಕ್ಕೆ ಆಗಮಿಸಿ ತಮ್ಮ ಬೆಂಬಲ ಸೂಚಿಸಿದರು.

ಕೇಂದ್ರ ಕಾರ್ಮಿಕ ಸಂಘಟನೆಗಳ ನಾಯಕರಾದ ಕಾಂ. ಸೂರ್ಯನಾರಾಯಣರಾವ್, ಎಂ. ಸಿ. ವೆಂಕಟರಾಮ್ ಮತ್ತು ಕಾಂ. ಪುಟ್ಟಯ್ಯ ಪ್ರತಿನಿಧಿಗಳನ್ನು ಉದ್ದೇಶಿಸಿ ಮಾತನಾಡಿದರು. ಪ್ರತಿನಿಧಿಗಳಾದ ಕಾಂ. ಎಂ. ಸಿ. ನರಸಿಂಹನ್, ಎ. ಜೆ. ಕೆ. ನಾಯರ್, ಬಿ. ಗಂಗಾಧರ್, ಸಿ. ನಂಜುಂಡಪ್ಪ, ದಸ್ತಗೀರ್ ಮತ್ತು ಉಮಾಕಾಂತ ನಾಯಕ್ ಮೊದಲಾದವರು ಮಾತನಾಡಿದರು.

ಕನಿಷ್ಠಕೂಲಿ ಕಾನೂನಿನ ವ್ಯಾಪ್ತಿಗೆ ಸೇರಿದ ಎಲ್ಲಾ ಕಾರ್ಮಿಕರ ಒಂದು ಸಮಾವೇಶವನ್ನು ಹೈದರಾಬಾದಿನಲ್ಲಿ ನಡೆಸಲು ಎಲ್ಲ ಕೇಂದ್ರ ಕಾರ್ಮಿಕ ಸಂಘಗಳು ನಿರ್ಧರಿಸಿವೆ. ಈ ಸಮಾವೇಶ ದಕ್ಷಿಣದ ನಾಲ್ಕು ರಾಜ್ಯಗಳಲ್ಲೂ ಈ ಬಗ್ಗೆ ಸಂಘಟಿತ ಚಳುವಳಿಯನ್ನು ನಡೆಸಲು ಯೋಜನೆ ರೂಪಿಸಲಿದೆ.

ತೆರಿಗೆ-ಶುಲ್ಕ ಪಾವತಿ ಮಾಡುವರನ್ನು. ಪಾವತಿ ಮಾಡದಂತೆ ಪ್ರಚೋದಿಸುವವರನ್ನು ಶಿಕ್ಷೆಗೆ ಗುರಿಪಡಿಸುವ ಬಗ್ಗೆ ರಾಜ್ಯಪಾಲರು ಹೊರಡಿಸಿರುವ ಸುಗ್ರೀವಾಜ್ಞೆಯನ್ನು ಈ ಸಮಾವೇಶ ಉಗ್ರವಾಗಿ ಖಂಡಿಸಿತು. ಈ ಕರಾಳ ಶಾಸನದ ವಿರುದ್ಧ ಹೋರಾಡಲು ಸೂಕ್ತ ಕಾರ್ಯಕ್ರಮ ಹಾಕಲು ಪ್ರಜಾಪ್ರಭುತ್ವ ಶಕ್ತಿಗಳಿಗೆ ಸಮಾವೇಶವು ಕರೆಕೊಟ್ಟಿತು.

ಅಸಂಘಟಿತರನ್ನು ಸಂಘಟಿಸುವ ದಿಶೆಯಲ್ಲಿ ಈ ಸಮಾವೇಶ ಅತ್ಯಂತ ಮಹತ್ವಪೂರ್ಣವಾದುದು. ಕಾರ್ಮಿಕರು ತಮ್ಮ ಶೋಷಣೆಯ ವಿರುದ್ಧ ಸಂಘಟಿತರಾಗುವದು ಇಂದಿನ ಆದ್ಯ ಅವಶ್ಯಕತೆ.

●

ವಿಶ್ವಕಥಾಕೋಶ ಕೃತಿಗಳ ಬಿಡುಗಡೆ

ಬೆಂಗಳೂರಿನಲ್ಲಿ ಏಪ್ರಿಲ್ 12 ರಂದು ಉಡ್‌ಲ್ಯಾಂಡ್ಸ್ ಹೋಟೆಲ್‌ನಲ್ಲಿ ನಡೆದ ಅದ್ದೂರಿಯ ಸಮಾರಂಭವೊಂದರಲ್ಲಿ ನವಕರ್ನಾಟಕ ಪಬ್ಲಿಕೇಷನ್ಸ್‌ರವರ ಸಾಹಸದ ಯೋಜನೆಯ ವಿಶ್ವಕಥಾಕೋಶದ ಮೂರನೆಯ ಕಂತಿನ ನಾಲ್ಕು ಪುಸ್ತಕಗಳು ಬಿಡುಗಡೆಯಾದವು. ಬಿಡುಗಡೆಯಾದ ನಾಲ್ಕು ಕಥಾಸಂಕಲನಗಳು :– ಸೋವಿಯತ್ ರಷ್ಯಾಗಳ ಕಥೆಗಳ ಸಂಗ್ರಹ 'ಹೆಜ್ಜೆ ಗುರುತು', ಜೆಕೋಸ್ಲಾವಾಕಿಯಾ ಮತ್ತು ಪೋಲೆಂಡ್ ಕಥೆಗಳ ಸಂಗ್ರಹ 'ನೆತ್ತರು ದೆವ್ವ', ವೇಲ್ಸ್ ಮತ್ತು ಸ್ಕಾಟ್‌ಲೆಂಡ್‌ಗಳ ಕಥೆಗಳನ್ನೊಳಗೊಂಡ 'ಅರಬಿ', ಮತ್ತು ಯುಗೋಸ್ಲಾವಿಯ, ಆಲ್ಬೇನಿಯ ಮತ್ತು ಬಲ್ಗೇರಿಯಾಗಳ ಕಥೆಗಳ ಸಂಗ್ರಹ 'ಬಾವಿಕಟ್ಟೆಯ ಬಳಿ'.

ಸಮಾರಂಭದ ಮುಖ್ಯ ಅತಿಥಿಯಾಗಿ, ಪುಸ್ತಕಗಳನ್ನು ಬಿಡುಗಡೆ ಮಾಡಿದ ತಮಿಳುನಾಡಿನ ಸುಪ್ರಸಿದ್ಧ ಕಥೆಗಾರ ಜಯಕಾಂತನ್ ಉತ್ತಮ ಭಾಷಾಂತರವು ಒಂದು ಕಲೆ ಮತ್ತು ಪ್ರತಿಭಾವಂತ ಅನುವಾದಕ ಮಾತ್ರ ಮೂಲ ಲೇಖನದ ಸಂದೇಶವನ್ನು, ಅಂತಸ್ಸತ್ವವನ್ನು ಗುರುತಿಸಿ, ಅನುವಾದಿಸಲು ಸಾಧ್ಯ ಎಂಬುದನ್ನು ತಿಳಿಸಿದರು. ನವಕರ್ನಾಟಕದವರ ಈ ಸಾಹಸಮಯ ಯೋಜನೆಯನ್ನು ಪ್ರಶಂಸಿಸಿ, ತಮಿಳು ಸಾಹಿತ್ಯದಲ್ಲೂ ಇಂತಹದೇ ಯೋಜನೆಯನ್ನುಹೊಂದುವ ಆಸೆ ಇದರಿಂದ ನನಗಾಗಿದೆ ಎಂದರು. ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ಬೆಂಗಳೂರುವಿಶ್ವವಿದ್ಯಾನಿಲಯದಉಪಕುಲಪತಿ ಡಾ|| ವಿಶ್ವನಾಥಯ್ಯನವರು ನವಕರ್ನಾಟಕದ ಈ ಸಾಹಸಮಯ ಯೋಜನೆಯನ್ನು ಪ್ರಶಂಸಿಸಿ "ಇದೊಂದು ಸಂತೋಷದ ಸಮಾರಂಭ, ಇಂತಹದೊಂದು ಪ್ರಯತ್ನ ಸಾಹಿತ್ಯಕ್ಷೇತ್ರದಲ್ಲಿ ಮಾತ್ರವಲ್ಲ, ವಿಜ್ಞಾನಕ್ಷೇತ್ರದಲ್ಲೂ ಇಂತಹ ಭಾಷಾಂತರಗಳು ನಮಗೆ ಲಭ್ಯವಾಗಬೇಕು" ಎಂದರು.

ಆರಂಭದಲ್ಲಿ ನವಕರ್ನಾಟಕ ಪಬ್ಲಿಕೇಷನ್ಸ್‌ನ ಅಧ್ಯಕ್ಷ ಬಿ. ವಿ. ಕಕ್ಕಿಲ್ಲಾಯರು ಸಭಿಕರನ್ನೂ, ಅತಿಥಿಗಳನ್ನೂ ಸ್ವಾಗತಿಸಿದರು. ವಿಶ್ವಕಥಾಕೋಶದ ಪ್ರಧಾನಸಂಪಾದಕ ಶ್ರೀ ನಿರಂಜನರವರು ಸಂಕಲನದಲ್ಲಿರುವ ಕಥೆಗಳ ಪರಿಚಯ ಮತ್ತು ಅನುವಾದಕರ ಪರಿಚಯ ಮಾಡಿಕೊಟ್ಟರು. ಸಂಸ್ಥೆಯ ಕಾರ್ಯದರ್ಶಿ ಆರ್. ಎಸ್. ರಾಜಾರಾಂ ವಂದನಾರ್ಪಣೆ ಮಾಡಿದರು.

○

ಕಾರ್ಯಕಾರಿ ಸಮಿತಿ ಸಭೆ

ಕಾಫೀ ಕ್ಯೂರಿಂಗ್, ಸಾಮಿಲ್ಸ್ ಮತ್ತು ಇತರ ಕಾರ್ಮಿಕರ ಸಂಘದ ಕಾರ್ಯಕಾರಿ ಸಮಿತಿಯ ಸಭೆಯು 21-4-81 ರಂದು ಹಾಸನದಲ್ಲಿರುವ ಸಂಘದ ಕಚೇರಿಯಲ್ಲಿ ಕಾಂ. ಸಿ. ನಂಜುಂಡಪ್ಪನವರ ಅಧ್ಯಕ್ಷತೆಯಲ್ಲಿ ನಡೆಯಿತು. ಸಂಘದ ಸ್ಥಾಪನೆಯ ನಂತರ ನಡೆದ ಕಾರ್ಯಚಟುವಟಿಕೆ ಬಗ್ಗೆ ಪ್ರಧಾನಕಾರ್ಯದರ್ಶಿ ಕಾಂ. ವಿ. ಸುಕುಮಾರ್ ಸಭೆ ಮುಂದೆ ವರದಿಕೊಟ್ಟರು. ಹರಿಹರದಲ್ಲಿ ನಡೆದ ಸಿ.ಐ. ಟಿ.ಯು. ರಾಜ್ಯಸಮ್ಮೇಳನದ ವರದಿ, ಸಾರ್ವಜನಿಕ ಕ್ಷೇತ್ರದ ಕಾರ್ಮಿಕರ ಹೋರಾಟಕ್ಕೆ ಬೆಂಬಲ ಸೂಚಿಸಿ 11-3-81 ರಂದು ನಡೆಸಿದ ಸಭೆ, 20-4-81ರಂದು ರೈತಕಾರ್ಮಿಕರ ಹೋರಾಟ ಸಮಿತಿಯ ಧರಣೆಯಲ್ಲಿ ಕಾರ್ಮಿಕರು ಭಾಗವಹಿಸಿದ್ದ ಬಗ್ಗೆ ಸಭೆ ಪರಿಶೀಲಿಸಿ ವರದಿಯನ್ನು ಅಂಗೀಕರಿಸಿತು. ಇತ್ತೀಚಿಗೆ ರಾಜ್ಯದಲ್ಲಿ ನಡೆದ ಪೋಲೀಸ್ ಗೋಲೀಬಾರನ್ನು ಖಂಡಿಸುವ ನಿರ್ಣಯವನ್ನು ಅಂಗೀಕರಿಸಿ, ಗೋಲೀಬಾರ್‌ನಲ್ಲಿ ಮೃತರಾದವರಿಗೆ ಶ್ರದ್ಧಾಂಜಲಿಯನ್ನರ್ಪಿಸಿತು. ಈ ಗೋಲೀಬಾರ್‌ನ ಬಗ್ಗೆ ನ್ಯಾಯಾಂಗ ತನಿಖೆಗೆ ಸರಕಾರವನ್ನು ಒತ್ತಾಯಿಸಲಾಯಿತು.

○

ನೀರಿನ ಬವಣೆ

ಗುಲಬರ್ಗಾದ ಅನೇಕ ಬಡಾವಣೆಗಳಲ್ಲಿ ನೀರಿನ ತಾಪತ್ರಯ ವಿಪರೀತವಾಗಿದ್ದು, ಎಷ್ಟು ಕಾದರೂ ಎರಡು ಕೊಡ ನೀರು ಸಿಕ್ಕುವದು ದುರ್ಲಭವಾಗಿದೆ. ಮಹಿಳೆಯರು ನೀರಿನ ತೊಂದರೆಯಿಂದ ವಿಮಂಚನೆಗೀಡಾಗಿದ್ದಾರೆ. ಅನ್ನವಿಲ್ಲದಿದ್ದರೆ ನೀರು ಕುಡಿಯೋಣವೆಂದರೆ ಅದಕ್ಕೂ ಬರ!

18-4-81ರಂದು ನೀರಿನ ತಾಪತ್ರಯದಿಂದ ತೊಂದರೆಗೀಡಾದ ಪ್ರದೇಶದ ಸುಮಾರು 300 ಜನ ಮಹಿಳೆಯರ ಸಹಿಗಳನ್ನು ಸಂಗ್ರಹಿಸಿ, ಲಾರಿಗಳ ಮೂಲಕವಾಗಲೀ, ಬೋರ್‌ವೆಲ್ ತೆಗೆಯುವದರ ಮೂಲಕವಾಗಲೀ ನೀರಿನ ತೊಂದರೆಯನ್ನು ನಿವಾರಿಸಬೇಕೆಂದು ಗುಲ್ಬರ್ಗದ ಮಹಿಳಾ ವಿಮೋಚನಾ ಸಂಘಟನಾ ಸಮಿತಿಯ ನಿಯೋಗವೊಂದು ಮುನ್ಸಿಪಲ್ ಕಮೀಷನರರಿಗೆ ಭೇಟಿಯಾಗಿ ಮನವಿ ಅರ್ಪಿಸಿತು. ನಿಯೋಗದ ನೇತೃತ್ವವನ್ನು ಮಹಿಳಾ ವಿಮೋಚನಾ ಸಂಘಟನೆಯ ಸಂಚಾಲಕಿ ಕೆ. ಶರೀಫಾ, ಸದಸ್ಯೆಯರಾದ ಮೆಹಮೂದಾ ಜಲಾಲ, ಪ್ರೇಮಿಲಾಬಾಯಿ, ಬೇಗಂ ಜಾನಿ ಮೊದಲಾದವರು ವಹಿಸಿದ್ದರು.

●

ಪೊಲಿಟ್‌ಬ್ಯೂರೋ ಹೇಳಿಕೆ

ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಪೊಲಿಟ್‌ಬ್ಯೂರೋ ಈ ಕೆಳಗಿನ ಹೇಳಿಕೆಯನ್ನು ನೀಡಿದೆ.

ಬಿ.ಜೆ.ಪಿ.ಗೆ ನಮ್ಮ "ರಾಜಕೀಯ ಕೇಳಿಕೆ" ಕುರಿತಾದ ಪತ್ರಿಕಾ ವರದಿಗಳನ್ನು ನೋಡಿ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್‌ಪಕ್ಷದ ಪೊಲಿಟ್‌ಬ್ಯೂರೋಗೆ ತಮಾಷೆಯೆನಿಸಿದೆ. ಈ 'ಕೇಳಿಕೆ' ಯನ್ನು ಸ್ವೀಕರಿಸಲು ಶರತ್ತುಗಳನ್ನೊಡ್ಡಿರುವ ಕೆಲವು ಬಿ.ಜೆ.ಪಿ. ನಾಯಕರ ಪ್ರತಿಕ್ರಿಯೆಗಳ ಬಗ್ಗೆ ಇನ್ನಷ್ಟು ತಮಾಷೆಯೆನಿಸಿದೆ.

ಈ ಎರಡು ಪಕ್ಷಗಳ ನಡುವೆ ಆಂತರಿಕ ಹಾಗೂ ವಿದೇಶಿ ಧೋರಣೆಗಳನ್ನು ಕುರಿತಂತೆ ಬಾಯ್ದೆರೆದುಕೊಂಡಿರುವ ದೊಡ್ಡ ಕಂದರವನ್ನು ಗಮನಿಸಿದರೆ ಈ ರೀತಿಯ "ಕೇಳಿಕೆ"ಬರಲು ಸಾಧ್ಯವಿಲ್ಲವೆಂಬುದು ತಲೆನೆಟ್ಟಗಿರುವ ಎಲ್ಲರಿಗೂ ಸ್ಪಷ್ಟವಾಗಿರಬೇಕು.

ಪೊಲಿಟ್‌ಬ್ಯೂರೋ ಸಭೆಯ ನಂತರ ನಡೆದ ಪತ್ರಿಕಾ ಸಮ್ಮೇಳನದಲ್ಲಿ ಹೇಳಿದ್ದಿಷ್ಟೇ.–ಕಾಂಗ್ರೆಸ್ (ಐ) ಬಗ್ಗೆ ಬಿ.ಜೆ.ಪಿ.ಯು ವಿರೋಧವನ್ನು ಘೋಷಿಸಿರುವುದರಿಂದ ಸರ್ವಾಧಿಕಾರೀ ಶಕ್ತಿಗಳ ವಿರುದ್ಧ ಹೋರಾಟದ ಮನವಿಯಲ್ಲಿ ಅದನ್ನು ಬಿಟ್ಟುಬಿಡಲು ಸಾಧ್ಯವಿಲ್ಲ. ಶರತ್ತುಗಳನ್ನೊಡ್ಡದೆ ಸರ್ವಾಧಿಕಾರೀ ಶಕ್ತಿಗಳ ವಿರುದ್ಧ ಹೋರಾಡಬಯಸುತ್ತದೋ ಇಲ್ಲವೋ ಎಂಬುದನ್ನು ಬಿ.ಜೆ.ಪಿ.ಯೇ ನಿರ್ಧರಿಸಬೇಕು. ಆದರೆ ಅದು ಈ ಹೋರಾಟವನ್ನು ಬೆಂಬಲಿಸುವ ಮೊದಲು ಶರತ್ತುಗಳನ್ನೊಡ್ಡಬಯಸುವಂತೆ ಕಾಣುತ್ತದೆ.

ಪ್ರಜಾಪ್ರಭುತ್ವದ ರಕ್ಷಣೆ, ಅಧ್ಯಕ್ಷೀಯ ಮಾದರಿಯ ಸರಕಾರಕ್ಕೆ ವಿರೋಧ, ಎಡಬಲವಿನ ಸರಕಾರಗಳ ವಿರುದ್ಧ ಪಿತೂರಿ ಇವುಗಳ ಬಗ್ಗೆ ಸಾಧ್ಯವಾದಷ್ಟು ಹೆಚ್ಚು ಮಟ್ಟದ ತಿಳುವಳಿಕೆ ರಾಜಕೀಯ ಪಕ್ಷಗಳ ನಡುವೆ ಇರುವುದು ಸರ್ವಾಧಿಕಾರದ ವಿರುದ್ಧ ಹೋರಾಟದಲ್ಲಿ ಬಹಳಷ್ಟು ಸಹಾಯಕವಾಗುತ್ತದೆ ಎಂದು ನಮ್ಮ ಪಕ್ಷ ಯಾವಾಗಲೂ ಹೇಳುತ್ತಾ ಬಂದಿದೆ.

ಆಶ್ವಾಸನೆ ಈಡೇರಿಕೆಗೆ ಒತ್ತಾಯ

ಚಿಕ್ಕಮಗಳೂರಿನ ಕಾಫೀ ಕ್ಯೂರಿಂಗ್ ಸಂಸ್ಥೆಗಳಾದ ಮೈಸೂರು ಕಾಫೀಕ್ಯೂರಿಂಗ್ ಮತ್ತು ಮಲೆನಾಡು ಪ್ಲಾಂಟರ್ಸ್ ಕಾಫೀಕ್ಯೂರಿಂಗ್ ವರ್ಕ್ಸ್‌ಗಳಲ್ಲಿ ಕೆಲಸ ಮಾಡಿಕೊಂಡಿರುವ ಕಾರ್ಮಿಕರು ತಮ್ಮ ದೀರ್ಘಕಾಲದ ಬೇಡಿಕೆಗಳಿಗಾಗಿ ಅನಿರ್ದಿಷ್ಟಕಾಲದ ಮುಷ್ಕರ ಹೂಡಿದ್ದರು. ಆ ಸಮಯದಲ್ಲಿ ಚಿಕ್ಕಮಗಳೂರಿಗೆ ಆಗಮಿಸಿದ್ದ ಪಂಚಾಯತ್ ರಾಜ್ ಮತ್ತು ಗ್ರಾಮಾಭಿವೃದ್ಧಿ ಸಚಿವ ಶ್ರೀ ಬೇಗಾನೆ ರಾಮಯ್ಯನವರಿಗೆ ಮುಷ್ಕರನಿರತ ಕಾರ್ಮಿಕರು ಮನವಿ ಅರ್ಪಿಸಿ, ಬೇಡಿಕೆಗಳನ್ನು ಈಡೇರಿಸುವಂತೆ ಆಡಳಿತ ಮಂಡಳಿಗಳ ಮೇಲೆ ಒತ್ತಾಯ ತರಬೇಕೆಂದೂ ವಿನಂತಿಸಲಾಗಿತ್ತು. ಮಂತ್ರಿವರ್ಯರ ಅಪೇಕ್ಷೆಯಂತೆ ಮುಷ್ಕರ ಹಿಂತೆಗೆದು ಸೌಹಾರ್ದಯುತ ವಾತಾವರಣ ಮೂಡುವಂತೆ ನೋಡಲಾಯಿತು. 27-3-81ರಂದು ಕಾರ್ಮಿಕ ಇಲಾಖೆಯ ಸಹಾಯಕ ಸಂಧಾನಾಧಿಕಾರಿಗಳ ಮುಂದೆ ಸಂಧಾನ ನಡೆಸಲು ಆಡಳಿತ ಮಂಡಳಿಯವರಿಗೆ ದೀರ್ಘಕಾಲದ ಕಾಲಾವಕಾಶವನ್ನು ಮಂತ್ರಿಗಳು ಕಲ್ಪಿಸಿಕೊಟ್ಟರು. ಮ್ಯಾನೇಜ್‌ಮೆಂಟ್‌ನವರು ಕನ್ಸಲಿಯೇಷನ್‌ಗೆ ಬರಲೇ ಇಲ್ಲ.

17-4-81ರಂದು ಶ್ರೀ ಬೇಗಾನೆ ರಾಮಯ್ಯನವರು ಚಿಕ್ಕಮಗಳೂರಿಗೆ ಬಂದಿದ್ದಾಗ, ಆಡಳಿತ ಮಂಡಳಿಗಳ ಮೊಂಡುತನದ ಬಗ್ಗೆ ಅವರ ಗಮನಕ್ಕೆ ತರಲಾಯಿತು. 20-4-81 ರಂದು ಪುನಃ ಅಂತಿಮ ಕನ್ಸಲಿಯೇಷನ್ ನಡೆದು ಯಾವ ಒಪ್ಪಂದಕ್ಕೂ ಬಾರದೆ ಸಂಧಾನ ಮುರಿದುಬಿದ್ದಿದೆ.

ಒಪ್ಪಂದ ಮಾಡಿಸುತ್ತೇನೆಂದು ಆಶ್ವಾಸನೆ ಕೊಟ್ಟಿದ್ದ ಮಂತ್ರಿಗಳು ಮತ್ತು ಸ್ಥಳೀಯ ಶಾಸಕರು ತಮ್ಮ ಮಾತನ್ನು ಈಡೇರಿಸಬೇಕೆಂದು ಇಲ್ಲದಿದ್ದರೆ ಮತ್ತೆ ತೀವ್ರರೀತಿಯ ಹೋರಾಟ ಹೂಡಬೇಕಾಗುವದೆಂದು ಕಾರ್ಮಿಕರ ಪರವಾಗಿ ಕಾರ್ಯದರ್ಶಿ ಕಾಂ. ಎ ಕೆ. ವಿಶ್ವನಾಥ ಎಚ್ಚರಿಸಿದ್ದಾರೆ.

○

ಸಮ್ಮೇಳನ

ಮಂಜೇಶ್ವರ ಡಿವಿಜನ್ ಕಲ್ಲು ಕಡಿಯುವ ಮಜೂರರ ಎರಡನೆಯ ವಾರ್ಷಿಕ ಸಮ್ಮೇಳನವು 19-4-81 ರಂದು ಮಂಜೇಶ್ವರ ಟೌನ್ ಬ್ಯಾಂಕ್ ಕಟ್ಟಡದಲ್ಲಿ ನಡೆಯಿತು. ಸಭೆಯ ಅಧ್ಯಕ್ಷತೆಯನ್ನು ಕಾಂ. ಕೆ. ರಾಘವನ್‌ರು ವಹಿಸಿದ್ದರು. ಕಾರ್ಯದರ್ಶಿ ಕಾಂ. ಸದಾನಂದರು ವರದಿ ಮಂಡಿಸಿದರು.

ಕಾಂ. ಬಿ. ಎಂ. ರಾಮಯ್ಯಶೆಟ್ಟಿ (ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಕಣ್ಣಾನೂರ ಜಿಲ್ಲಾಸಮಿತಿ ಸದಸ್ಯ) ಯವರು ತಮ್ಮ ಉದ್ಘಾಟನಾ ಭಾಷಣದಲ್ಲಿ ಕಲ್ಲುಕಡಿಯುವ ಮಜೂರರ ಸಾಧನೆಯ ಬಗ್ಗೆ ಶ್ಲಾಘಿಸುತ್ತಾ ಸಂಘಟಿತ ಶಕ್ತಿಯ ಐಕ್ಯತೆಯನ್ನು ಬಲಪಡಿಸಲು ಕರೆನೀಡಿದರು. ಕೆನರಾ ಬ್ಯಾಂಕ್ ಸ್ಟಾಫ್ ಯೂನಿಯನ್ ಪರವಾಗಿ ಕಾಂ. ಬಿ. ಎಂ. ಮಾಧವನರು, ಸಿ.ಐ.ಟಿ.ಯು. ಪರವಾಗಿ ಕಾಂ.ಯು. ಕೆ. ನಾರಾಯಣ, ಡಿ.ವೈ.ಎಫ್.ಐ. ಪರವಾಗಿ ಕಾಂ.ವಸಂತರು ಶುಭಾಶಯ ಸಲ್ಲಿಸಿದರು. ಅದೇ ದಿನ ಸಾಯಂಕಾಲ ಮಂಜೇಶ್ವರ ರೈಲ್ವೆ ನಿಲ್ದಾಣದ ಸಮೀಪ ಬಹಿರಂಗ ಸಭೆ ನಡೆಯಿತು.

●

ಬೀಡಿ ಕಾರ್ಮಿಕರ ಹೋರಾಟ

ತಮ್ಮ ಬೇಡಿಕೆಗಳ ಈಡೇರಿಕೆಗಾಗಿ ರಾಜ್ಯ ಬೀಡಿ ಕಾರ್ಮಿಕರು ಅನೇಕ ದಿನಗಳಿಂದ ಸತತ ಹೋರಾಟ ಮಾಡುತ್ತಿದ್ದಾರೆ. ರಾಜ್ಯ ಬೀಡಿ ಕಾರ್ಮಿಕರ ಫೆಡರೇಷನ್ ಕರೆಯ ಮೇರೆಗೆ ರಾಜ್ಯಾದ್ಯಂತ ಪಿಕೆಟಿಂಗ್, ಧರಣಿ ಸತ್ಯಾಗ್ರಹ ನಡೆಯುತ್ತಿವೆ. ಚಳುವಳಿ ಕುರಿತು ಈ ಕೆಳಕಂಡ ವರದಿಗಳು ಕೈ ಸೇರಿವೆ.

ಮಂಗಳೂರು

ದಿನಾಂಕ ಏ. 16 ಮತ್ತು 17 ರಂದು ಬೀಡಿ ಮಾಲೀಕರ ಅಸೋಸಿಯೇಶನ್ ಅಧ್ಯಕ್ಷರಾದ ಶ್ರೀ ಎಂ. ಡಿ. ಕುಶೆಯವರ ಆಫೀಸೆದುರು ಪಿಕೆಟಿಂಗ್ ಮಾಡಲು ನಿರ್ಧರಿಸಲಾಗಿತ್ತು. ಮೊದಲೇ "ಎಂ. ಡಿ. ಕುಶೆಯವರಿಗೊಂದು ಬಹಿರಂಗ ಪತ್ರ" ಎಂಬ ಕರಪತ್ರ ಮುದ್ರಿಸಿ ವಿತರಣೆ ಮಾಡಿತ್ತು.

ದಿನಾಂಕ 17 ರಂದು ಸಾವಿರಾರು ಬೀಡಿ ಕಾರ್ಮಿಕರು (ಅಧಿಕಾಂಶ ಮಹಿಳೆಯರು) ಬೀಡಿ ಫ್ಯಾಕ್ಟರಿಗಳೆದುರು ಬೀಡಿ ಕಟ್ಟುಗಳನ್ನು ಸುಟ್ಟು ತಮ್ಮ ಆಕ್ರೋಶ ವ್ಯಕ್ತ ಪಡಿಸಿದರು. ಬೀಡಿ ಮಾಲೀಕರ ಅಸೋಸಿಯೇಷನ್ ಅಧ್ಯಕ್ಷ ಶ್ರೀ ಕುಶೆಯವರನ್ನು ಘೇರಾವೋ ಮಾಡಿದರು. 4-4-81ರಂದು ಬೇಡಿಕೆಗಳ ಬಗ್ಗೆ ಮಾತುಕತೆ ನಡೆಸಿ ಇತ್ಯರ್ಥಗೊಳಿಸೋಣ ಎಂಬ ಆಶ್ವಾಸನೆಯನ್ನು ಶ್ರೀ ಕುಶೆ ಧಿಕ್ಕರಿಸಿದ್ದರಿಂದ ಕಾರ್ಮಿಕರು ಅವರನ್ನು ಘೇರಾವೋ ಮಾಡಿದ್ದರು. ಜಿಲ್ಲಾಧಿಕಾರಿಯವರ ಮಧ್ಯ ಪ್ರವೇಶದ ನಂತರ ಘೇರಾವೋ ಹಿಂತೆಗೆದುಕೊಂಡರೂ ಪಿಕೆಟಿಂಗ್ ಕಾರ್ಯಕ್ರಮ ಮುಂದುವರೆಸಿದರು.

ಬೆಂಗಳೂರು

ರಾಜ್ಯದಾದ್ಯಂತ ನಡೆಯುತ್ತಿರುವ ಹೋರಾಟದ ಅಂಗವಾಗಿ ಬೆಂಗಳೂರು ಭಾರತ್ ಬೀಡಿ ಫ್ಯಾಕ್ಟರಿ ಎದುರು ನೂರಾರು (ಮಹಿಳಾ ಕಾರ್ಮಿಕರನ್ನೊಳಗೊಂಡು) ಕಾರ್ಮಿಕರು 17-4-81 ರಂದು ಯಶಸ್ವೀ ಪಿಕೆಟಿಂಗ್ ನಡೆಸಿದ್ದಾರೆ. ಬೆಂಗಳೂರಿನ ಎಲ್ಲಾ ಬೀಡಿ ಫ್ಯಾಕ್ಟರಿಗಳೆದುರು ಪಿಕೆಟಿಂಗ್ ಕಾರ್ಯಕ್ರಮದ ತಯಾರಿ ನಡೆಯುತ್ತಿದೆ.

ತುಮಕೂರು

23-4-81ರಂದು ಗಣೇಶ್ ಬೀಡಿ ಫ್ಯಾಕ್ಟರಿಯ ಅಂಗಸಂಸ್ಥೆಯಾದ ಜ್ಯೋತಿ ಹೋಂ ಇಂಡಸ್ಟ್ರೀಸ್ ಬೀಡಿ ಕಾರ್ಖಾನೆಯ ಮುಂದೆ ಬೀಡಿಕಾರ್ಮಿಕರು ಪಿಕೆಟಿಂಗ್ ನಡೆಸಿದರು. ಈ ಪಿಕೆಟಿಂಗ್‌ನಲ್ಲಿ ನೂರಾರು ಮಹಿಳಾ ಕಾರ್ಮಿಕರು ಭಾಗವಹಿಸಿದ್ದರು. ನಂತರ ಮ್ಯಾನೇಜಮೆಂಟಿನವರು ತಮ್ಮ ಕೇಂದ್ರ ಕಚೇರಿಗೆ ಫೋನ್ ಮೂಲಕ ಸಂಪರ್ಕಿಸಿ ಒಂದು ಸಾವಿರ ಬೀಡಿಗಳಿಗೆ ಒಂದು ರೂ. ಹೆಚ್ಚಿಸಲು ತೀರ್ಮಾನಕ್ಕೆ ಬಂದು ಸ್ಥಳೀಯ ಸಿ.ಐ.ಟಿ.ಯು. ಮುಖಂಡರೊಡನೆ ಚರ್ಚಿಸಿ ಒಪ್ಪಂದ ಮಾಡಿಕೊಂಡಿದ್ದಾರೆ. ಇದು ಕೇವಲ ತಾತ್ಕಾಲಿಕ ಒಪ್ಪಂದ ಮಾತ್ರವಾಗಿದ್ದು, ಬೀಡಿ ಫೆಡರೇಷನ್ನಿನ ತೀರ್ಮಾನದಂತೆ ಸಾವಿರ ಬೀಡಿಗಳ ಕೂಲಿ 12ರೂ. ಸಿಗುವತನಕ ಹೋರಾಡಬೇಕಿದೆ.

ಮಾಲೀಕರೊಡನೆ ನಡೆದ ಚರ್ಚೆಯಲ್ಲಿ ಕಾಂ. ಸಯ್ಯದ್ ಹಯಾತ್, ಒದೂದ್, ವಜೀರ್, ನಜೀರ್, ಮಹಮದ್. ಬಾಬು, ಮಲ್ಲಯ್ಯ, ಶ್ರೀಮಂತಿ ಹಾಜರಾಂಬಿ, ರಜಿಯಾಬೇಗಂ ಮುಂತಾದವರು ಭಾಗವಹಿಸಿದ್ದರು.

ಕುಣಿಗಲ್

21-4-81ರಂದು ಕುಣಿಗಲ್ ತಾಲ್ಲೂಕು ಬೀಡಿ ಕೆಲಸಗಾರರ ಪರಿಯಿಂದ ತಮ್ಮ ಬೇಡಿಕೆಗಳಿಗಾಗಿ ಒತ್ತಾಯಿಸಲು ಬೀಡಿ ಕೆಲಸಗಾರರು ಮೆರವಣಿಗೆಯಲ್ಲಿ ಹೋಗಿ ತಹಸೀಲ್ದಾರರಿಗೆ ಮನವಿ ಸಲ್ಲಿಸಿದರು. ತಹಸೀಲ್ದಾರರ ಆಫೀಸಿನಲ್ಲಿ ಲ್ಯಾಂಡಟ್ರಿಬ್ಯೂನಲ್ ನಡೆಯುತ್ತಿದ್ದುದರಿಂದ ಅಸಿಸ್ಟೆಂಟ್ ಕಮೀಶನರರು ಅಲ್ಲಿದ್ದರು. ಅವರು ಕಾರ್ಮಿಕ ಪ್ರತಿನಿಧಿಗಳನ್ನು ಕರೆಸಿ ಚರ್ಚಿಸಿ, ಕಾರ್ಮಿಕರ ಅಹವಾಲನ್ನು ಕೂಡಲೇ ಸರಕಾರಕ್ಕೆ ರವಾನಿಸುವುದಾಗಿ ತಿಳಿಸಿದರು. ಮೆರವಣಿಗೆಯ ನೇತೃತ್ವವನ್ನು ಕಾಂ. ಅಂಜನಪ್ಪ, ಸಲೀಮಾ ಬೇಗಂ ಮೊದಲಾದವರು ವಹಿಸಿದ್ದರು.

ಹರಿಹರ

ಕರ್ನಾಟಕ ರಾಜ್ಯ ಬೀಡಿ ಫೆಡರೇಶನ್ನಿನ ಕರೆಯಂತೆ, ಹರಿಹರ ತಾಲ್ಲೂಕು ಬೀಡಿ ಕೆಲಸಗಾರರು ತಾ. 13-4-81ರಿಂದ ತಾ. 19-4-81 ರವರೆಗೆ ಬೀಡಿ ಡಿಪೋಗಳ ಮುಂದೆ ಧರಣಿ ಸತ್ಯಾಗ್ರಹ ನಡೆಸಿದರು. ತಾ. 17-4-81ರಿಂದ ಬೀಡಿ ಕೆಲಸವನ್ನು ಸಂಪೂರ್ಣ ನಿಲ್ಲಿಸಲಾಯಿತು. ಕಾರ್ಯಕ್ರಮವನ್ನು ವಿಫಲಗೊಳಿಸಲು ಕೆಲವು ಬೀಡಿ ಮಾಲೀಕರು ಕಳ್ಳತನದಿಂದ ಬೀಡಿ ತೆಗೆದುಕೊಳ್ಳುತ್ತಿದ್ದುದನ್ನು ಗಮನಿಸಿ, ಡಿಪೋಗಳನ್ನು ಸಂಪೂರ್ಣ ಮುಚ್ಚಿಸಲಾಯಿತು.

ಮಂಗಳೂರು ಗಣೇಶ, 30 ನಂ. ಬೀಡಿ, ಮುಂತಾದ ದೊಡ್ಡ ಡಿಪೋಗಳ ಮುಂದೆ ಅಧಿಕ ಸಂಖ್ಯೆಯಲ್ಲಿ ಮಹಿಳಾ ಕಾರ್ಮಿಕರು ಧರಣಿಯಲ್ಲಿ ಭಾಗವಹಿಸಿದ್ದರು.

ರಾಜ್ಯದಾದ್ಯಂತ ನಡೆದ ಹೋರಾಟದ ಫಲವಾಗಿ ಹರಿಹರದ ಬೀಡಿ ಕಾರ್ಮಿಕರಿಗೂ ತಾತ್ಕಾಲಿಕ ಪರಿಹಾರವಾಗಿ ಒಂದು ಸಾವಿರ ಬೀಡಿಗೆ ರೂ. 1/– ಹೆಚ್ಚಳ ಸಿಕ್ಕಿದೆ. ನ್ಯಾಯವಾದ ಕೂಲಿ ಸಿಗದಿದ್ದಲ್ಲಿ ದೀರ್ಘ ಹೋರಾಟ ನಡೆಸಲು ಕಾರ್ಮಿಕರು ಉತ್ಸಾಹದಿಂದ ಸಿದ್ಧತೆ ನಡೆಸಿದ್ದಾರೆ. ವಾರವಿಡೀ ನಡೆದ ಕಾರ್ಯಕ್ರಮದ ನೇತೃತ್ವವನ್ನು ಕಾಂ. ನಜೀರ್‌ಖಾನ್, ಕಾಂ. ಮದಾರ್‌ಸಾಬ್ ಹಾಗೂ ಕಾಂ. ಇಕ್‌ಬಾಲ್ ಹುಸೇನ್ ವಹಿಸಿದ್ದರು.

●

ಜಿಲ್ಲಾ ರೈತ ಸಂಘದ ಸಂಘಟನೆ

ಕರ್ನಾಟಕ ಪ್ರಾಂತ ರೈತಸಂಘದ ನೇತೃತ್ವದಲ್ಲಿ ಚಿತ್ರದುರ್ಗ ಜಿಲ್ಲಾ ರೈತಸಂಘವನ್ನು ಪ್ರಾರಂಭಿಸಬೇಕೆಂದು ತಾ. 20-4-81ರಂದು ಚಿತ್ರದುರ್ಗದಲ್ಲಿ ಸೇರಿದ್ದ ಕಾರ್ಯಕರ್ತರ ಸಭೆಯಲ್ಲಿ ತೀರ್ಮಾನಿಸಲಾಯಿತು.

ಜಿಲ್ಲೆಯಲ್ಲಿ ರೈತಸಂಘದ ಪ್ರಭಾವವಿರುವ ಚಳ್ಳಕೆರೆ ತಾಲ್ಲೂಕು ಈರುಳ್ಳಿ ಬೆಳೆಗಾರರ ಸಮಸ್ಯೆಗಳನ್ನು ಕೂಡಲೇ ತೆಗೆದುಕೊಳ್ಳಬೇಕೆಂದು ನಿರ್ಧರಿಸಲಾಯಿತು. ಜಿಲ್ಲೆಯ ಅಭಾವ ಪೀಡಿತ ತಾಲ್ಲೂಕುಗಳಿಗೆ ಪರಿಹಾರ, ಭದ್ರಾ ಮೇಲ್ದಂಡೆಯೋಜನೆಯನ್ನು ಕೂಡಲೇ ಕಾರ್ಯಗತಗೊಳಿಸುವುದು, ಕೃಷಿ ಕೂಲಿಗಾರರಿಗೆ ಕನಿಷ್ಠ ವೇತನವನ್ನು ನಿಗದಿಪಡಿಸುವ ಬಗ್ಗೆ ಸಹಾ ಕಾರ್ಯಕ್ರಮ ಹಾಕಲು ತೀರ್ಮಾನಿಸಲಾಯಿತು.

ದುದ್ದ, ನಿಪ್ಪಾಣಿಯಲ್ಲಿ ರೈತರ ಮೇಲೆ ನಡೆದ ಗೋಲಿಬಾರನ್ನು ಖಂಡಿಸಲಾಯಿತು.

ನಂತರ ಜಿಲ್ಲಾ ರೈತಸಂಘಟನಾ ಸಮಿತಿಯನ್ನು ರಚಿಸಲಾಯಿತು. ಸಮಿತಿಯ ಅಧ್ಯಕ್ಷರಾಗಿ ಕಾಂ. ಬಾಗಳಿ ಶಿವಾನಂದಸ್ವಾಮಿ ಹಾಗೂ ಕಾರ್ಯದರ್ಶಿಯಾಗಿ ಕಾಂ. ಅಹೋಬಲ ನಾಯಕ್ ಆಯ್ಕೆಯಾದರು. ಸಮಿತಿಯ ಸದಸ್ಯರಾಗಿ ಡಿ. ಕೆ. ಸಿದ್ದಪ್ಪ, ಜಯಣ್ಣ, ರಾಜಶೇಖರಗೌಡ, ಕೆ. ಹೆಚ್. ಓಬಯ್ಯ, ಕೃಷ್ಣಪ್ಪ ಹಾಗೂ ಇಕ್‌ಬಾಲ್ ಹುಸೇನ್ ಆಯ್ಕೆಯಾದರು.

●

ಸಚಿವರ ಹೇಳಿಕೆ ಖಂಡನೆ

ಸ್ಟೈಫಂಡರಿ ಪದವೀಧರ ಯೋಜನೆ ಕುರಿತು ಸಚಿವ ಜಕನೂರ ಅವರು ವಿಧಾನಸೌಧದಲ್ಲಿ ನೀಡಿರುವ ಹೇಳಿಕೆಯನ್ನು ಎಸ್.ಎಫ್.ಐ. ಗುಲ್ಬರ್ಗಾ ಘಟಕದ ಕಾರ್ಯದರ್ಶಿ ಶಿವಶರಣ ಮುಂಗಳಿ ಉಗ್ರವಾಗಿ ಖಂಡಿಸಿದ್ದಾರೆ.

ಮೂರು ವರುಷ ಸರಕಾರಿ ಸೇವೆಯಲ್ಲಿರುವ ಸ್ಟೈಫಂಡರಿ ಪದವೀಧರರನ್ನು ಕೂಡಲೇ ಖಾಯಂಗೊಳಿಸಬೇಕು ಎಂದು ಒತ್ತಾಯಿಸಿದ್ದಾರೆ.

o

"ಸಿ.ಐ.ಟಿ.ಯು. ಗೆಲುವು"

ಹರಿಹರ ಕಿರ್ಲೋಸ್ಕರ್ ಕೆಲಸಗಾರರ ಸಂಘದ ಸಹಕಾರ ಸಂಘದಲ್ಲಿ, ಕೆಲಸಗಾರರ ಪರವಾಗಿ ಎರಡು ಡೈರಕ್ಟರ್ ಸ್ಥಾನಗಳಿವೆ. ಪ್ರತಿ ವರ್ಷದಂತೆ ಈ ಎರಡು ಸ್ಥಾನಗಳಿಗೆ ಚುನಾವಣೆ ನಡೆಯಿತು. ಆದರೆ ಈ ಸಾರಿಯ ವೈಶಿಷ್ಟವೆಂದರೆ, ಸಿ.ಐ.ಟಿ.ಯು. ನೇತೃತ್ವದಲ್ಲಿರುವ ಸಂಘದ ಅಭ್ಯರ್ಥಿಗಳ ವಿರುದ್ಧ ಆರೆಸ್ಸೆಸ್-ಬಾಜಪ, ಸಿ.ಪಿ.ಐ. ಮತ್ತು ಕಾಂಗ್ರೆಸ್‌ಗಳು ಒಂದಾಗಿ ಚುನಾವಣೆಯನ್ನು ಪ್ರತಿಷ್ಠೆಯ ಕಣವನ್ನಾಗಿ ಮಾಡಿದ್ದು. ಸಿ.ಐ.ಟಿ.ಯು. ನಾಯಕತ್ವದ ವಿರುದ್ಧ ಅಪಪ್ರಚಾರ, ಬೆದರಿಕೆ ಹಾಗೂ ಚುನಾಯಿತ ಸಂಘವನ್ನು ಉರುಳಿಸುವ ಹಂಚಿಕೆಯನ್ನು ಹೂಡಿದರು.

ಇದಕ್ಕೆ ತದ್ವಿರುದ್ಧವಾಗಿ ತಾ. 19-4-81ರಂದು ನಡೆದ ಸಹಕಾರ ಸಂಘದ ಚುನಾವಣೆಯಲ್ಲಿ ಕಾರ್ಮಿಕರು ಸಿ.ಐ.ಟಿ.ಯು. ಅಭ್ಯರ್ಥಿಗಳನ್ನು ಐನ್ನೂರಕ್ಕೂ ಹೆಚ್ಚು ಬಹುಮತದಿಂದ ಚುನಾಯಿಸಿದರು. ಸಂಘದ ಅಭ್ಯರ್ಥಿಗಳಾದ ಕಾಂ. ಜಕಣಾಚಾರ್ ಹಾಗೂ ಕಾಂ. ವಿ. ಆರ್. ಕುಲಕರ್ಣಿ ಚುನಾವಣೆಯಲ್ಲಿ ಜಯಗಳಿಸಿದರು. ಫಲಿತಾಂಶ ಪ್ರಕಟವಾದ ನಂತರ ನಡೆದ ಬೃಹತ್ ಮೆರವಣಿಗೆ ಮತ್ತು ಬಹಿರಂಗ ಸಭೆಯಲ್ಲಿ ಕಾರ್ಮಿಕರು ಪಟಾಕಿ, ಮತಾಪು ಹಚ್ಚಿ ಹರ್ಷೋದ್ಗಾರಗಳನ್ನು ತೆಗೆದರು. ಸಭೆಯನ್ನು ಉದ್ದೇಶಿಸಿ ಕಾಂ. ಎನ್. ಜಿ. ಪಠಾಣ ಮತ್ತು ಕಾಂ. ಡಿ. ಜಿ. ಜೋಷಿ ಮುಂತಾದವರು ಮಾತನಾಡಿದರು. ●

ಸಿ.ಐ.ಟಿ.ಯು.ವಿನ ಮೇ ದಿನದ ಪ್ರಣಾಳಿಕೆ

(5ನೇ ಪುಟದಿಂದ)

ಪ್ರಜಾಪ್ರಭುತ್ವ ಹಕ್ಕುಗಳ ದೃಢ ರಕ್ಷಣೆಗೆ ನಿಲ್ಲುವ ಮೂಲಕ ಈಗಾಗಲೇ ದೇಶದ ಜನತೆಯ ಮೇಲೆ ತಮ್ಮ ಪ್ರಭಾವವನ್ನು ಉಂಟುಮಾಡಿವೆ. ಆದ್ದರಿಂದಲೇ ಈ ಎಡ ನೇತೃತ್ವದ ಸರ್ಕಾರಗಳನ್ನು ಉರುಳಿಸಲು ಇತ್ತೀಚಿಗೆ ಮತ್ತಷ್ಟು ವ್ಯಾಪಕ ಪ್ರಯತ್ನ ನಡೆಯುತ್ತಿದೆ. ಕಳೆದ ಏಪ್ರಿಲ್ 3 ರಂದು ಪ. ಬಂಗಾಳ ಬಂದ್ ಆಚರಣೆಯ ನೆಪದಲ್ಲಿ ಜನತೆಯ ಮೇಲೆ ನಡೆಸಲಾದ ಕ್ರೂರ ಧಾಳಿಯನ್ನು ಗಮನಿಸಿದರೆ ಆಳುವ ಕಾಂಗ್ರೆಸ್ ಪಕ್ಷವು ಯಾವ ಮಟ್ಟಕ್ಕೆ ಇಳಿಯುತ್ತದೆಯೆಂಬುದನ್ನು ಸ್ಪಷ್ಟವಾಗಿ ತಿಳಿಯಬಹುದು. ಭಾರತದ ಕಾರ್ಮಿಕ ವರ್ಗವು ತನ್ನದೇ ವರ್ಗ ಹಿತಾಸಕ್ತಿಯಿಂದ ಈ ಎಡ ನೇತೃತ್ವದ ಸರ್ಕಾರಗಳ ರಕ್ಷಣೆಗಾಗಿ ತನ್ನ ಬಲವಾದ ಧ್ವನಿಯೆತ್ತಲು ಸಿ. ಐ. ಟಿ.ಯು. ಈ ಮೂಲಕ ಕರೆ ನೀಡುತ್ತದೆ.

ರೈತ-ಕಾರ್ಮಿಕರ ಐಕ್ಯತೆ

ಹಲವಾರು ದಶಕಗಳ ಭೀಕರ ಶೋಷಣೆಯ ನಂತರ ಗ್ರಾಮೀಣ ಪ್ರದೇಶದ ನಮ್ಮ ಸಹೋದರರು ಎಚ್ಚೆತ್ತು ಮುಂದೆ ಬಂದಿರುವುದನ್ನು ಮನಗಾಣುವಂತೆ ಸಿ.ಐ.ಟಿ.ಯು. ಕಾರ್ಮಿಕವರ್ಗಕ್ಕೆ ಕರೆ ನೀಡುತ್ತದೆ. 1981ರ ಮಾರ್ಚ್ 26ರಂದು ನವದೆಹಲಿಯಲ್ಲಿ ನಡೆದ ಐತಿಹಾಸಿಕ ಕಿಸಾನ್ ರ್‍ಯಾಲಿಯ ಮೂಲಕ ತಮ್ಮ ನ್ಯಾಯಯುತ ಬೇಡಿಕೆಗಳನ್ನು ಮುಂದಿಟ್ಟಿದ್ದಾರೆ. ಕಾರ್ಮಿಕವರ್ಗವು ತನ್ನ ವೇತನ, ಟ್ರೇಡ್ ಯೂನಿಯನ್ ಹಕ್ಕುಗಳು ಮತ್ತು ಉತ್ತಮ ಜೀವನ ಮಟ್ಟಕ್ಕಾಗಿ ತನ್ನ ಹೋರಾಟವನ್ನು ಮುಂದುವರಿಸುವುದರೊಂದಿಗೆ ರೈತ ವಿಭಾಗದ ಹಿತಕ್ಕಾಗಿಯೂ ಹೋರಾಡಬೇಕಾಗಿದೆ. ಗ್ರಾಮೀಣ ಮತ್ತು ಪಟ್ಟಣ ಪ್ರದೇಶಗಳ ನಿರುದ್ಯೋಗಿ ಯುವಜನಾಂಗದ ಹಿತರಕ್ಷಣೆಗಾಗಿ, ಉದ್ಯೋಗದ ಹಕ್ಕನ್ನು ನ್ಯಾಯಯುತವಾಗಿ ಸಂವಿಧಾನದಲ್ಲಿ ಮೂಲಭೂತಹಕ್ಕನ್ನಾಗಿ ಸೇರಿಸಲು ಸಹ ಒತ್ತಾಯಿಸಿ ಕಾರ್ಮಿಕವರ್ಗವು ಹೋರಾಡಬೇಕಾಗಿದೆ. ಕಾರ್ಮಿಕ ವರ್ಗದ ಒಂದು ಭಾಗವಾದ ದುಡಿಯುವ ಮಹಿಳೆಯರ ಮೇಲೆ ಬಂಡವಾಳಶಾಹಿ ವರ್ಗವು ತನ್ನ ಅಸ್ತ್ರವಾಗಿ ನಡೆಸುತ್ತಿರುವ ದೈಹಿಕ ಅತ್ಯಾಚಾರವನ್ನೊಳಗೊಂಡಂತೆ ಸಾಮಾಜಿಕ, ಔದ್ಯೋಗಿಕ, ಇತರೆ ಎಲ್ಲಾ ರೀತಿಯ ದಬ್ಬಾಳಿಕೆಯನ್ನು ಕಾರ್ಮಿಕವರ್ಗವು ಎದುರಿಸಬೇಕಾಗಿದೆ. ಹರಿಜನ-ಗಿರಿಜನ ವಿಭಾಗದ ಮೇಲಿನ ಸಾಮಾಜಿಕ ದಬ್ಬಾಳಿಕೆಯ ವಿರುದ್ಧ ಮತ್ತು ಅವರ ಆರ್ಥಿಕ ಅಭಿವೃದ್ಧಿಗಾಗಿ ಸಹ ಕಾರ್ಮಿಕ ವರ್ಗವು ಹೋರಾಡಬೇಕಾಗಿದೆ. ಒಂದು ಉತ್ತಮ ಸಮಾಜ ವ್ಯವಸ್ಥೆಗಾಗಿ ಮತ್ತು ಶಾಂತಿಸ್ಥಾಪನೆಗಾಗಿ ಭಾರತದ ಎಲ್ಲ ಶೋಷಿತ ಜನವಿಭಾಗದ ಅಭೇದ್ಯ ಐಕ್ಯತೆಯ ಎಚ್ಚೆತ್ತ ಕರೆ ಇಡೀ ದೇಶದಲ್ಲಿಯೇ ಪ್ರತಿಧ್ವನಿಸಲಿ.

ಮೇ ದಿನ ಚಿರಾಯುವಾಗಲಿ !

ಪ್ರಪಂಚದ ಕಾರ್ಮಿಕವರ್ಗದ ಸೌಹಾರ್ದತೆಯ ಅಂತರಾಷ್ಟ್ರೀಯ ದಿನ ಚಿರಾಯುವಾಗಲಿ !

ಸಿ.ಐ.ಟಿ.ಯು. ಚಿರಾಯುವಾಗಲಿ !

o

ಐಕ್ಯರಂಗಕ್ಕೆ

ಚಂದಾದಾರರಾಗಿ

ಅಸ್ಸಾಂನಲ್ಲಿ ಎಡಪಂಥೀಯರ ತತ್ವಬದ್ಧ ನಿಲುವು

(1ನೇ ಪುಟದಿಂದ)

ವಿರುದ್ಧ ಪಿತೂರಿ ನಡೆಸಿ ಅವುಗಳನ್ನು ಉರುಳಿಸಿದ್ದು ಮಾತ್ರವಲ್ಲ 1970ರ ದಶಕದಲ್ಲಿ ಪಶ್ಚಿಮ ಬಂಗಾಳದಲ್ಲಿ ಅರೆ-ಫ್ಯಾಸಿಸ್ಟ್ ಭಯೋತ್ಪಾದನೆ ನಡೆಸಿತು. ತ್ರಿಪುರಾ ಹಾಗೂ ಕೇರಳಗಳಲ್ಲಿ ಕೂಡಾ ಅದು ಸಿ.ಪಿ.ಐ.(ಎಂ)ನ ಬೆಳವಣಿಗೆಯನ್ನು, ಕಾಂಗ್ರೆಸ್ ಸರ್ಕಾರದ ವಿರುದ್ಧ ಎಡ ಹಾಗೂ ಪ್ರಜಾಸತ್ತಾತ್ಮಕ ಶಕ್ತಿಗಳ ಐಕ್ಯತೆಯನ್ನು ತಡೆಯಲು ತನ್ನಿಂದ ಸಾಧ್ಯವಿದ್ದದನ್ನೆಲ್ಲಾ ಮಾಡಿತು.

ಇತರ ಹಲವು ರಾಜಕೀಯ ಶಕ್ತಿಗಳು ತಮ್ಮ ಸ್ವಂತ ಅನುಭವದಿಂದಲೇ ಕಾಂಗ್ರೆಸ್(ಐ)ನ ನೇತೃತ್ವದಲ್ಲಿನ ಸರ್ವಾಧಿಕಾರೀ ಶಕ್ತಿಗಳನ್ನು ಪ್ರತಿರೋಧಿಸುವ ಅಗತ್ಯವನ್ನು ಮನಗಾಣುತ್ತಿವೆ ಮತ್ತು ಅದರ ವಿರುದ್ಧ ಹೋರಾಡಲು ಪರಸ್ಪರ ಹೆಚ್ಚೆಚ್ಚು ಹತ್ತಿರ ಬರುತ್ತಿವೆ ಎಂಬ ಬಗ್ಗೆ ಸಿ.ಪಿ.ಐ.(ಎಂ)ಗೆ ಸಂತೋಷವಾಗುತ್ತಿದೆ. ಈ ಚಳುವಳಿಯ ಶಕ್ತಿವರ್ಧಿಸುವಂತೆಮಾಡಿ ಕಾಂಗ್ರೆಸ್(ಐ)ನ ಆಟವನ್ನು ವಿಫಲಗೊಳಿಸಲು ಸರ್ವಪ್ರಯತ್ನಗಳನ್ನೂ ಪಕ್ಷ ನಡೆಸುತ್ತದೆ.

ಈ ಪರಿಸ್ಥಿತಿಯಲ್ಲಿ 'ಇಂಡಿಯನ್ ಎಕ್ಸ್‌ಪ್ರೆಸ್'ನ ವರದಿಗಾರ ಹೇಳುವ 'ಒಂದು ರೀತಿಯ ಸಹಅಸ್ತಿತ್ವದ ಒಪ್ಪಂದ'ದ ಬಗ್ಗೆ ಕಾಂಗ್ರೆಸ್ (ಐ) ಅಥವಾಸಿ.ಪಿ.ಐ.(ಎಂ)ಮಾತುಕತೆ ನಡೆಸಲು ಹೇಗೆ ಸಾಧ್ಯ ಎಂದು ಅರ್ಥವಾಗುವುದಿಲ್ಲ. ಕಾಂಗ್ರೆಸ್(ಐ)ನ್ನು ಅದರ ಇಷ್ಟಕ್ಕೇ ಬಿಟ್ಟರೆ 1970ರ ದಶಕದಲ್ಲಿ ಪಶ್ಚಿಮ ಬಂಗಾಲದಲ್ಲಿ ಮಾಡಿದ್ದನ್ನು ಅದು ಪುನರಾವರ್ತನೆಗೊಳಿಸುವುದು ಎಂಬುದನ್ನು ಯಾರಾದರೂ ತಿಳಿಯಬಹುದು. ಕೇಂದ್ರದಲ್ಲಿ ಅಧಿಕಾರವಹಿಸಿಕೊಂಡ 14 ತಿಂಗಳುಗಳ ನಂತರವೂ ಹಾಗೆಮಾಡಲು ಅದಕ್ಕೆ ಆಗುತ್ತಿಲ್ಲವೆಂದರೆ ಅದರ ಕೀರ್ತಿ ಮೇಲ್ಪಟ್ಟಕ್ಕೇರಿರುವ ಜನರ ರಾಜಕೀಯ ಪ್ರಜ್ಞೆಗೆ, ಪ್ರಜಾಸತ್ತಾತ್ಮಕ ಶಕ್ತಿಗಳ ಹೆಚ್ಚುತ್ತಿರುವ ಒಗ್ಗಟ್ಟಿಗೆ ಹಾಗೂ ಒಂದು ಪಕ್ಷವಾಗಿ ಕಾಂಗ್ರೆಸ್(ಐ) ಕ್ರಮೇಣ ಕ್ಷೀಣಗೊಳ್ಳುತ್ತಿರುವುದಕ್ಕೆ ಸಲ್ಲಬೇಕು. ಈ ಪ್ರಕ್ರಿಯೆ ಮುಂದುವರಿಯುವಂತೆ ಸಹಾಯ ಸಲ್ಲಿಸಲು ಸಿ.ಪಿ.ಐ.(ಎಂ) ಹಾಗೂ ಅದರ ಮಿತ್ರರು ಪ್ರಯತ್ನಿಸುತ್ತಾರೆ. ಮಾರ್ಚ್ 26ರಂದು ನವದೆಹಲಿಯಲ್ಲಿ ನಡೆದ ರೈತರ ಪ್ರಚಂಡ ಹೊತಪ್ರದರ್ಶನವು ಈ ದಿಕ್ಕಿನಲ್ಲಿ ನಡೆದ ಪ್ರಯತ್ನಗಳು ಫಲಕೊಡಲಾರಂಭಿಸಿವೆ ಎಂದು ತೋರಿಸಿಕೊಟ್ಟಿದೆ.

ಈ ಹಿನ್ನೆಲೆಯಲ್ಲಿ ನೋಡಿದರೆ, ಅವಿಶ್ವಾಸ ಗೊತ್ತುವಳಿಯ ಮೇಲೆ ಅಸ್ಸಾಂನ ಎಡಪಂಥೀಯ ವಿಧಾಯಕರ ಗೈರುಹಾಜರಿ, ನಂತರ ರಾಷ್ಟ್ರೀಯ ಭದ್ರತಾ ಶಾಸನದ ಮೇಲೆ ಸಿ.ಪಿ.ಐ.(ಎಂ) ಸದಸ್ಯರ ಕಡಿತದ ಗೊತ್ತುವಳಿ ಸಿ.ಪಿ.ಐ.(ಎಂ) ಹಾಗೂ ಅದರ ಮಿತ್ರರು ಸ್ವತಂತ್ರ ತತ್ವಬದ್ಧ ನಿಲುವನ್ನು ತಳೆಯುತ್ತಿದ್ದಾರೆ ಎಂಬುದನ್ನು ತೋರಿಸಿಕೊಟ್ಟಿವೆ. ಜನತಾಪಕ್ಷದೊಡನೆ ಮತದಾನಮಾಡಿದ ಸಿ.ಪಿ.ಐ.(ಎಂ.ಎಲ್)ನ ಸದಸ್ಯ ಹಾಗೂ ಕಾಂಗ್ರೆಸ್(ಐ)ನೊಡನೆ ಮತದಾನಮಾಡಿದ ಪಿ. ಸಿ. ಟಿ. ಎ. ಯಂತೆಮಾಡದೆ ನಾಲ್ಕು ಎಡಪಕ್ಷಗಳಿಗೆ ಸೇರಿದ 23 ಸದಸ್ಯರು ರಾಜ್ಯದಲ್ಲಿ ಅಧಿಕಾರಕ್ಕಾಗಿ ಕಲಹ ನಡೆಸುತ್ತಿರುವ ಆಳುವವರ್ಗಗಳ ಈ ಎರಡು ಗುಂಪುಗಳಲ್ಲಿ ಯಾವುದಾದರೊಂದಕ್ಕೆ ತಮ್ಮ ಬೆಂಬಲ ನೀಡಲು ನಿರಾಕರಿಸಿದರು. ಎಡಪಂಥೀಯರಿಗೆ ಆಸಕ್ತಿಯಿರುವುದು ಪ್ರಜಾಸತ್ತಾತ್ಮಕ ತತ್ವಗಳ ಆಧಾರದ ಮೇಲೆ ಜನತೆಯ ಐಕ್ಯತೆಯ ಬಗ್ಗೆ, ಈ ಗುಂಪುಗಳಲ್ಲಿ ಯಾವುದೋ ಒಂದನ್ನು ಅಧಿಕಾರಕ್ಕೆ ತರುವುದು ಅಥವಾ ಉರುಳಿಸುವುದರಲ್ಲಿಲ್ಲ.

ಅಸ್ಸಾಂ ಹಾಗೂ ಆಗ್ನೇಯ ಕ್ಷೇತ್ರದಲ್ಲಿನ ಅದರ ನೆರೆಹೊರೆಯವರೊಂದಿಗೆ ಗುಜರಾತ್, ಮೊರಾದಾಬಾದ್ ಇತ್ಯಾದಿ ಎಚ್ಚರಿಕೆಯ ಸೂಚನೆ ಕೊಟ್ಟಿದೆ. ನಮ್ಮ ದೇಶದ ಐಕ್ಯತೆ, ಸಮಗ್ರತೆ ಮತ್ತು ಸಾರ್ವಭೌಮತೆ ಹಾಗೂ ಅದರ ಬಹುಭಾಷಾ, ಬಹುಸಂಸ್ಕೃತಿಗಳ ಜನತೆಗೆ ಜಾತಿವಾದೀ, ಬಹುಸಂಖ್ಯಾತ ಅಥವಾ ಅಲ್ಪಸಂಖ್ಯಾತ ಕೋಮುವಾದ,"ಮಣ್ಣಿನ ಮಕ್ಕಳ ಸಿದ್ಧಾಂತ", "ವಿದೇಶೀಯರ ವಿರುದ್ಧ ಚಳುವಳಿ" ಇತ್ಯಾದಿಗಳ ರೂಪಗಳಲ್ಲಿ ಕಾಣಿಸಿಕೊಳ್ಳುತ್ತಿರುವ ಪ್ರತ್ಯೇಕತಾ ಹಾಗೂ ವಿಚ್ಛಿದ್ರಕಾರೀ ಶಕ್ತಿಗಳಿಂದ ಬೆದರಿಕೆ ಉಂಟಾಗಿದೆ. ಆಳುವ ವರ್ಗಗಳ ರಾಜಕೀಯ ಪಕ್ಷಗಳು, ಅಖಿಲಭಾರತ ಮಟ್ಟದಲ್ಲಿ ಕಾಂಗ್ರೆಸ್ (ಐ) ಮತ್ತು ಬಿ.ಜೆ.ಪಿ., ಅಸ್ಸಾಂನಲ್ಲಿ ಜನತಾಪಕ್ಷ ಈ ವಿಚ್ಛಿದ್ರಕಾರೀ ಚಳುವಳಿಗಳಲ್ಲಿ ಒಂದಿಲ್ಲೊಂದಕ್ಕೆ ಪ್ರತ್ಯಕ್ಷ ಅಥವಾ ಪರೋಕ್ಷ ಬೆಂಬಲ ಕೊಡುತ್ತಿವೆ. ಈ ನಡುವೆ ಬೂರ್ಜ್ವಾ-ಭೂಮಾಲಿಕಕ್ಷಪಗಳಲ್ಲಿ ಒಂದಿಲ್ಲೊಂದರಲ್ಲಿರುವ ತಮ್ಮ ಏಜಂಟರ ಮೂಲಕ ಸಾಮ್ರಾಜ್ಯಶಾಹಿಯ ಪೈಶಾಚಿಕ ಯೋಜನೆಗಳೂ ಹಾಗೂ ತನ್ನ ದುಷ್ಟ ಉದ್ದೇಶಗಳಿಗೆ ಈ ದೇಶವನ್ನು ನೇರವಾಗಿ ಉಪಯೋಗಿಸುವ ಪ್ರಯತ್ನಗಳೂ ಇವೆ.

ಇತರ ಸಮಾನ ಧ್ಯೇಯದ ಪ್ರಜಾಸತ್ತಾತ್ಮಕ, ಜಾತ್ಯಾತೀತ ಹಾಗೂ ದೇಶಪ್ರೇಮೀ ಶಕ್ತಿಗಳೊಂದಿಗೆ ಕೈಸೇರಿಕೊಂಡು ಒಂದೆಡೆ ಕಾಂಗ್ರೆಸ್(ಐ) ವಿರುದ್ಧ, ಇನ್ನೊಂದುಕಡೆ ಬೂರ್ಜ್ವಾ ವಿರೋಧ ಪಕ್ಷಗಳ ವಿರುದ್ಧ ಒಂದು ಸುಯೋಗ್ಯ ಪರ್ಯಾಯವನ್ನು ಅಭಿವೃದ್ಧಿಪಡಿಸುವ ತನ್ನ ಜವಾಬ್ದಾರಿಯ ಬಗ್ಗೆ ಸಿ.ಪಿ.ಐ.(ಎಂ) ಪ್ರಜ್ಞಾಶೀಲವಾಗಿದೆ. ಆಳುವ ವರ್ಗಗಳ ಪಕ್ಷಗಳಿಗೆ ಬೇಕಾಗಿರುವುದು ಒಂದು ರಾಜ್ಯ ಹಾಗೂ ಕೇಂದ್ರದಲ್ಲಿ ತಮಗೆ ಅಧಿಕಾರವೇ ಹೊರತು ರಾಷ್ಟ್ರೀಯ ಹಿತಾಸಕ್ತಿಗಳಲ್ಲ. ಅಸ್ಸಾಂ ವಿಧಾನಸಭೆಯ ಎಡಪಂಥೀಯ ಸದಸ್ಯರು ತಳೆದ ನಿಲವು ಹಾಗೂ ದಿಲ್ಲಿಯ ಕಿಸಾನ್ ಪ್ರದರ್ಶನದೊಂದಿಗೆ ಪೂರ್ಣಗೊಂಡ ಇತರ ಹಲವು ಬೆಳವಣಿಗೆಗಳು ಇಂತಹದೊಂದು ಶಕ್ತಿ ರೂಪುಗೊಳ್ಳುತ್ತಲಿದೆಯೆಂಬುದನ್ನು ತೋರಿಸಿಕೊಟ್ಟಿದೆ.

ಮೇಲಿನದನ್ನು ಬರೆಯುವ ಹೊತ್ತಿಗೆ ಬಂದಿರುವ ಸುದ್ದಿಯ ಪ್ರಕಾರ ಕಡಿತದ ಗೊತ್ತುವಳಿಯ ಮೇಲೆ ಮೊದಲು ಮತದಾನ ನಡೆಯಬೇಕೆಂದು ಸಭಾಧ್ಯಕ್ಷರು ರೂಲಿಂಗ್ ನೀಡಿದ್ದಾರೆ. ಇದನ್ನು ಸ್ವೀಕರಿಸಿದ ನಂತರ (ಇದು ಸರ್ಕಾರಕ್ಕೆ ಒಂದು ಸೋಲು) ಬೇಡಿಕೆಯನ್ನೇ ಹಿಂತೆಗೆದುಕೊಳ್ಳಲಾಯಿತು. ಇದು ಎಡಪಂಥೀಯರ ನಿಲುವನ್ನು ಸಂಪೂರ್ಣವಾಗಿ ಎತ್ತಿಹಿಡಿದಿದೆ.

o

ಜೂನ್ ಮೊದಲವಾರ ಬೆಂಗಳೂರಿನಲ್ಲಿ

"ರಾಜ್ಯಮಹಿಳಾ ಸಮ್ಮೇಳನ"

ಇತ್ತೀಚೆಗೆ ಮದರಾಸಿನಲ್ಲಿ ಮಹಿಳೆಯರ ರಾಷ್ಟ್ರಮಟ್ಟದ ಸಮ್ಮೇಳನವು ನಡೆದು "ಅಖಿಲ ಭಾರತ ಪ್ರಜಾಸತ್ತಾತ್ಮಕ ಮಹಿಳಾ ಸಂಘಟನೆ"ಯನ್ನು ಸ್ಥಾಪಿಸಲಾಗಿದೆ. ಕರ್ನಾಟಕ ರಾಜ್ಯದಲ್ಲೂ ಮಹಿಳೆಯರ ಪ್ರಬಲ ಸಂಘಟನೆಯನ್ನು ಕಟ್ಟಿ, ಮಹಿಳೆಯರ ಶೋಷಣೆಯ ವಿರುದ್ಧ ಸಂಘಟಿತ ಚಳುವಳಿ ನಡೆಸುವಂತೆ ಮಾಡುವುದಕ್ಕಾಗಿ ರಾಜ್ಯಮಟ್ಟದ ಸಮ್ಮೇಳನವನ್ನು 1981 ಜೂನ್ 1, 2 ಮತ್ತು 3ರಂದು ಬೆಂಗಳೂರಿನಲ್ಲಿ ನಡೆಸಲು ತೀರ್ಮಾನಿಸಲಾಗಿದೆ. ಏಪ್ರಿಲ್ 14ರಂದು ಬೆಂಗಳೂರಿನಲ್ಲಿ ಸೇರಿದ್ದ ಮಹಿಳೆಯರ ಸಭೆಯಲ್ಲಿ ಚರ್ಚಿಸಿ, ಸಮ್ಮೇಳನವನ್ನು ಯಶಸ್ವಿಯಾಗಿ ನಡೆಸಲು ತೀರ್ಮಾನಿಸಲಾಯಿತು. ಸುಮಾರು 30 ಜನ ಮಹಿಳೆಯರನ್ನೊಳಗೊಂಡ ಸ್ವಾಗತ ಸಮಿತಿಯನ್ನು ರಚಿಸಲಾಗಿದೆ.

ಈ ಮಹಿಳಾ ಸಮ್ಮೇಳನದಲ್ಲಿ ಕಾಂ. ಸುಶೀಲಾ ಗೋಪಾಲನ್, ಎಂ. ಪಿ., ಕಾಂ. ಮೈಥಿಲಿ ಶಿವರಾಮನ್, ತಮಿಳುನಾಡು ಮಹಿಳಾ ಮುಖಂಡೆ; ಮಹಿಳಾ ಮುಂದಾಳು ಶ್ರೀಮತಿ ಮೇರಿದೇವಸ್ಯ; ಪ್ರಸಿದ್ಧ ಸಾಹಿತಿ ಡಾ. ಅನುಪಮಾ ನಿರಂಜನ ಮೊದಲಾದವರೂ ಭಾಗವಹಿಸುವ ನಿರೀಕ್ಷೆ ಇದೆ. ಸಮ್ಮೇಳನದ ಕೊನೆಯ ದಿನ ಮಹಿಳೆಯರಿಂದ ಬೃಹತ್ ಮೆರವಣಿಗೆ, ಬಹಿರಂಗ ಸಭೆ ನಡೆಸಲಾಗುವುದು. ಸುಮಾರು 400ರಷ್ಟು ಪ್ರತಿನಿಧಿಗಳು ಭಾಗವಹಿಸುವ ನಿರೀಕ್ಷೆ ಇದೆ. ರಾಜ್ಯದ ಎಲ್ಲಾ ಜಿಲ್ಲೆಗಳಿಂದಲೂ ಆದಷ್ಟು ಹೆಚ್ಚಿಗೆ ಪ್ರತಿನಿಧಿಗಳನ್ನು ಕಳುಹಿಸಿಕೊಡುವಂತೆಯೂ, ಸಮ್ಮೇಳನಕ್ಕೆ ಎಲ್ಲಾ ರೀತಿಯ ಸಹಾಯ, ಸಹಕಾರಗಳನ್ನು ಕೊಡುವಂತೆಯೂ ಸ್ವಾಗತ ಸಮಿತಿಯು ವಿನಂತಿಸಿದೆ.

ಸಮ್ಮೇಳನದ ಬಗ್ಗೆ ಹೆಚ್ಚಿನ ವಿವರಗಳಿಗೆ ಈ ಕೆಳಗಿನ ವಿಳಾಸದೊಂದಿಗೆ ವ್ಯವಹರಿಸಬಹುದು.

ಗಾಯತ್ರಿ
ಸ್ವಾಗತ ಸಮಿತಿ ಅಧ್ಯಕ್ಷೆ
354, 7ನೇ ಕ್ರಾಸ್, ವಿಲ್ಸನ್‌ಗಾರ್ಡನ್
ಬೆಂಗಳೂರು-560027

ಐಕ್ಯರಂಗದ ಆಫೀಸಿನಿಂದಲೂ ವಿವರಗಳನ್ನು ಪಡೆಯಬಹುದು.

"ಮೇ ವಿಶೇಷಾಂಕ"

ಐಕ್ಯರಂಗ ಪತ್ರಿಕೆಯ ಮೇ ವಿಶೇಷಾಂಕವು ಮೇ ಮೂರನೆ ವಾರ, ಅಂದರೆ ಮೇ 17ರಂದು ಪ್ರಕಟವಾಗಲಿದೆ. ಹದಿನೇಳರಂದು ವಿಶೇಷಾಂಕವು ಹೊರಬರಲಿರುವುದರಿಂದ ಮೇ 10ರಂದಿನ ಪತ್ರಿಕೆ ಪ್ರಕಟವಾಗುವುದಿಲ್ಲ. ಮೇ 10 ಮತ್ತು 17ರ ಸಂಚಿಕೆಗಳು ಒಂದಾಗಿ 17ರಂದು ವಿಶೇಷಾಂಕವಾಗಿ ಪ್ರಕಟವಾಗಲಿದೆ. ಓದುಗರು, ಚಂದಾದಾರರು ಮತ್ತು ಏಜೆಂಟರುಗಳು ಸಹಕರಿಸಬೇಕಾಗಿ ವಿನಂತಿ. ವಿಶೇಷಾಂಕದ ಬೆಲೆ ಒಂದೂ ಕಾಲು ರೂಪಾಯಿ.

ಐಕ್ಯರಂಗ ಓದುಗರು, ಚಂದಾದಾರರು ಮತ್ತು ಏಜಂಟರುಗಳ ಗಮನಕ್ಕೆ

"ಐಕ್ಯರಂಗದ ಬೆಲೆಏರಿಕೆ"

ಬೆಲೆಏರಿಕೆ, ಆಡಳಿತ ಮತ್ತು ವ್ಯವಸ್ಥಾಪನಾ ವೆಚ್ಚಗಳ ಹೆಚ್ಚುವಿಕೆಗಳ ಕಾರಣದಿಂದ ಕಡಿಮೆ ಪ್ರಸಾರವಿರುವ ಐಕ್ಯರಂಗ ಪತ್ರಿಕೆಯನ್ನು ನಡೆಸುವುದು ಕಷ್ಟವಾಗಿದೆ. ಆದುದರಿಂದ ಮೇ ತಿಂಗಳ ನಾಲ್ಕನೇ ವಾರದಿಂದ, ಅಂದರೆ ಮೇ 24ರ ಪತ್ರಿಕೆಯಿಂದ ಮೊದಲ್ಗೊಂಡು ಬಿಡಿಪ್ರತಿಯ ಬೆಲೆಯನ್ನು 60 ಪೈಸೆಗೆ ಏರಿಸುವ ನಿರ್ಣಯವನ್ನು ಕೈಗೊಳ್ಳಲಾಗಿದೆ. ಪತ್ರಿಕೆಯ ಬೆಲೆಯನ್ನು ಏರಿಸುವುದರಿಂದ ನಮ್ಮ ಓದುಗರಿಗಾಗುವ ತೊಂದರೆಯ ಬಗ್ಗೆ ನಮಗೆ ಅರಿವಿದ್ದರೂ, ಬೆಲೆಏರಿಸದೆ ಗತ್ಯಂತರವಿಲ್ಲ. ಸಹೃದಯದಿಂದ ಓದುಗರು ಮತ್ತು ಚಂದಾದಾರರು ನಮ್ಮೊಂದಿಗೆ ಸಹಕರಿಸಬೇಕಾಗಿ ವಿನಂತಿಸುತ್ತೇವೆ.

ಪತ್ರಿಕೆಯ ಬೆಲೆಯನ್ನು ಏರಿಸುವುದರೊಂದಿಗೆ, ಪತ್ರಿಕೆಯನ್ನು ಉತ್ತಮಗೊಳಿಸುವುದು, ಸಮಯಕ್ಕೆ ಸರಿಯಾಗಿ ಓದುಗರನ್ನು ತಲುಪುವಂತೆಮಾಡಲು ಪ್ರಯತ್ನಿಸುವುದು, ಆಡಳಿತ ಮತ್ತು ವ್ಯವಸ್ಥೆಯನ್ನು ಉತ್ತಮಗೊಳಿಸುವುದು - ಈ ಬಗ್ಗೆ ಇನ್ನೂ ಹೆಚ್ಚಿನ ಗಮನಕೊಡಲು ನಾವು ಪ್ರಯತ್ನಿಸುವ ಭರವಸೆಯನ್ನೀಯುವೆವು.

ಹಾಗೆಯೇ ಪತ್ರಿಕೆಗೆ ಹೆಚ್ಚು ಚಂದಾದಾರರನ್ನು ಸೇರಿಸುವುದು, ಪತ್ರಿಕೆಯ ಪ್ರಸಾರವನ್ನು ಹೆಚ್ಚಿಸುವುದು, ಸಮಯಕ್ಕೆ ಸರಿಯಾಗಿ ಹಣದ ಪಾವತಿಮಾಡುವುದು-ಈ ಬಗ್ಗೆ ನಮ್ಮ ಏಜೆಂಟರುಗಳೂ, ಓದುಗರೂ ಹೆಚ್ಚಿಗೆ ಗಮನವೀಯಲು ವಿನಂತಿಸುತ್ತೇವೆ. ಪಕ್ಷದ ಮುಖಪತ್ರಿಕೆಯನ್ನು ಉತ್ತಮಪಡಿಸಲು ಮತ್ತು ಪ್ರಸಾರವನ್ನು ಹೆಚ್ಚಿಸಲು, ಪಕ್ಷದ ಎಲ್ಲಾ ಸಮಿತಿಗಳೂ ಮತ್ತು ಸದಸ್ಯರುಗಳು ಶ್ರಮಿಸುವುದು ಅತ್ಯವಶ್ಯ.

ಎಂ. ಕೆ. ಭಟ್
ಸಂಪಾದಕ
ಸಂಪಾದಕ ಮಂಡಳಿ ಪರವಾಗಿ

ಗಮನಿಸಿ

ಮೇ 6ರಿಂದ 10ರವರೆಗೆ ಬೆಂಗಳೂರಿನಲ್ಲಿ ನಡೆಯಬೇಕಾಗಿದ್ದ ಸಿ.ಐ.ಟಿ.ಯು. ಕೇಂದ್ರ ಶಾಲೆಯು ಸಂಬಂಧಪಟ್ಟ ಶಿಕ್ಷಕರ ಅನಾನುಕೂಲದಿಂದಾಗಿ ನಡೆಯುವುದಿಲ್ಲ.

ಸಿ. ನಂಜುಂಡಪ್ಪ
ಪ್ರಧಾನಕಾರ್ಯದರ್ಶಿ
ಸಿ.ಐ.ಟಿ.ಯು. ರಾಜ್ಯಸಮಿತಿ

ಐಕ್ಯರಂಗ ಹೊಸದರ

1981 ಮೇ 24 ರಿಂದ

ಬಿಡಿ ಪ್ರತಿ	: 60ಪೈಸೆ
6 ತಿಂಗಳಿಗೆ	: 15ರೂ.
ವಾರ್ಷಿಕ ಚಂದಾ	: 30ರೂ.

Printed by P. Ramachandra Rao at Nutan Printing Publishing & Training Centre, 405, Sampige Road, Malleswaram, Bangalore-560003, and Published by him on behalf of the Communist Party of India (Marxist) Karnataka State Committee, L-56, K. V. Temple Street, Sultanpet, Bangalore-560 053.
Editorial and managerial office : L-56, K. V. Temple Street, Sultanpet, Bangalore-560 053. Phone : 24654
EDITOR : M. K. BHAT